ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೧

**ಪಟ್ಟಿ – ೩೧**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಬುಧವಾರ, ದಿನಾಂಕ: ೨೨ನೇ ನವೆಂಬರ್, ೨೦೧೭**

---

## ಸಮೂಹ – III

೧. ಕಂದಾಯ ಸಚಿವರು.

೨. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

೩. ಅರಣ್ಯ ಸಚಿವರು.

೪. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೫. ಕಾರ್ಮಿಕ ಸಚಿವರು.

೬. ವಸತಿ ಸಚಿವರು.

೭. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು.

---

## ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೭೨ (೪೪೩೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ ಬರುವ ಯೋಜನೆಗಳು ಯಾವುವು; ಈ ಯೋಜನೆಗಳಿಗೆ ಸರ್ಕಾರ ೨೦೧೩–೧೪ ರಿಂದ ೨೦೧೭–೧೮ ರವರೆಗೆ ಆಯವ್ಯಯದಲ್ಲಿ ನಿಗದಿಪಡಿಸಿದ ಹಣ ಎಷ್ಟು; ಬಿಡುಗಡೆ ಮಾಡಿದ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು; ಬಾಕಿ ಎಷ್ಟು; (ವಿವರವನ್ನು ವರ್ಷಾವಾರು, ಯೋಜನಾವಾರು ನೀಡುವುದು)

(ಆ) 'ಕೆರೆಗಳ ಅಭಿವೃದ್ಧಿ–ನಾಡಿನ ಶ್ರೇಯೋಭಿವೃದ್ಧಿ' ಯೋಜನೆಯಡಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಈ ಯೋಜನೆಗೆ ೨೦೧೩–೧೪ ರಿಂದ ೨೦೧೭–೧೮ರವರೆಗೆ ಮೀಸಲಿಟ್ಟ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು; ಬಾಕಿ ಎಷ್ಟು; ಇದುವರೆವಿಗೆ ಎಷ್ಟು ಕೆರೆಗಳ ಅಭಿವೃದ್ಧಿ ಪಡಿಸಲಾಗಿದೆ; (ವರ್ಷಾವಾರು, ಜಿಲ್ಲಾವಾರು ಹಾಗೂ ಅಭಿವೃದ್ಧಿ ಪಡಿಸಿದ ಕೆರೆಗಳ ಸಂಪೂರ್ಣ ವಿವರ ನೀಡುವುದು)

(ಇ) ೨೦೧೩–೧೪ ರಿಂದ ೨೦೧೭–೧೮ ರವರೆಗೆ ಕೆರೆಗಳ ಹೂಳೆತ್ತಲು ಹಾಗೂ ಅಂತರ್ಜಲ ವೃದ್ಧಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) 'ಸೂರ್ಯಜ್ಯೋತಿ ರೈತರ ಬಾಳಿನ ಪರಂಜ್ಯೋತಿ' ಯೋಜನೆಯಡಿ ಇದುವರೆವಿಗೆ ಎಷ್ಟು ಕೊಳವೆ ಬಾವಿಯನ್ನು ಕೊರೆಸಲಾಗಿದೆ; (ವಿವರ, ಫಲಾನುಭವಿಗಳ ಸಂಖ್ಯೆ ಸಹಿತ ವರ್ಷಾವಾರು, ಜಿಲ್ಲಾವಾರು ನೀಡುವುದು)

(ಉ) ರಾಜ್ಯದಲ್ಲಿ ೨೦೧೩–೧೪ ರಿಂದ ೨೦೧೭–೧೮ ರವರೆಗೆ ಎಷ್ಟು ಕೆರೆಗಳ ಒತ್ತುವರಿ ತೆರವು ಮತ್ತು ಕೆರೆಗಳ ಪೋಷಕ ಕಾಲುವೆ/ರಾಜ ಕಾಲುವೆಗಳ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗಿದೆ; ಈ ಕಾರ್ಯಕ್ಕೆ ಮೀಸಲಿಟ್ಟ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು; ಬಾಕಿ ಎಷ್ಟು? (ವಿವರ ನೀಡುವುದು)

## ೨೦೧೬ರ ಸೆಪ್ಟೆಂಬರ್‌ನಲ್ಲಿ ಭಾಲ್ಕಿ ಮತ್ತು ಔರಾದ್‌ನಲ್ಲಿ ಒಡೆದ ಕೆರೆಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೭೩ (೪೫೫೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬ರ ಸೆಪ್ಟೆಂಬರ್‌ನಲ್ಲಿ ಭಾಲ್ಕಿ ಮತ್ತು ಔರಾದ್ ತಾಲ್ಲೂಕಿನಲ್ಲಿ ಕೆರೆ ಒಡೆದು ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ನೀಡಲಾಗಿದೆಯೇ; ನೀಡಿದ್ದರೆ, ಎಷ್ಟು ನೀಡಲಾಗಿದೆ; (ವಿವರ ನೀಡುವುದು)

(ಆ) ಕೆರೆ ಒಡೆದು ಕೆಳಭಾಗದ ಜಮೀನಿನಲ್ಲಿರುವ ಮಣ್ಣು ಕೊಚ್ಚಿಕೊಂಡು ಹೋಗಿ ರೈತರು ಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ರೈತರಿಗೆ ಯಾವ ರೀತಿ ಪರಿಹಾರ ನೀಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಕಲಬುರಗಿಯಲ್ಲಿ ಕೆ.ಎ.ಟಿ. ಪೀಠ ಸ್ಥಾಪನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) –**

೩೯೭೪ (೪೬೦೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ವಿಭಾಗೀಯ ಕೇಂದ್ರವಾದ ಕಲಬುರಗಿಯಲ್ಲಿ ಕೆ.ಎ.ಟಿ. ಪೀಠ ಮಂಜೂರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಇದ್ದರೆ, ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಕೆ.ಎ.ಟಿ. ಪೀಠ ಮಂಜೂರಾಗಿ ಹಲವು ವರ್ಷಗಳು ಕಳೆದರೂ ಸಹ ಇನ್ನೂ ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕಿದೆಯೇ; ಇದ್ದರೆ, ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು)

(ಇ) ಸದರಿ ಕೆ.ಎ.ಟಿ. ಪೀಠ ಸ್ಥಾಪಿಸಿ ಕಾರ್ಯಾರಂಭ ಮಾಡಲು ಸರ್ಕಾರ ಮುಂದಾಗುವುದೇ; ಇದ್ದರೆ, ಯಾವ ಕಾಲಮಿತಿಯೊಳಗೆ ಮಾಡಲಾಗುವುದು ಹಾಗೂ ಸರ್ಕಾರದ ಮುಂದಿರುವ ಯೋಜನೆಗಳೇನು; (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದ ಒಳಾಂಗಣ ಕ್ರೀಡಾಂಗಣಗಳ ಯೋಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೩೯೭೫ (೪೬೦೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಮಂಜೂರಾದ ಒಳಾಂಗಣ ಕ್ರೀಡಾಂಗಣಗಳು ಎಷ್ಟು; (ಯೋಜನಾವಾರು, ವೆಚ್ಚವಾರು ಹಾಗೂ ಮಂಜೂರಾದ ದಿನಾಂಕಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಒಳಾಂಗಣ ಕ್ರೀಡಾಂಗಣಗಳು ಮಂಜೂರಾಗಿ ಕಾಮಗಾರಿಗಳು ಪ್ರಾರಂಭವಾಗದೇ ನೆನಗುದಿಗೆ ಬಿದ್ದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)

(ಇ) ಸದರಿ ಭಾಗದ ಯುವಜನರ ಕ್ರೀಡಾ ಆಸಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸದರಿ ಒಳಾಂಗಣ ಕ್ರೀಡಾಂಗಣಗಳ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

## ಅತಿವೃಷ್ಠಿ ಹಾಗೂ ಅನಾವೃಷ್ಠಿಯಿಂದಾದ ಹಾನಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) –**

೩೯೭೬ (೪೬೦೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಕಂದಾಯ ವಿಭಾಗ ಹಾಗೂ ಹರಪನಹಳ್ಳಿ ತಾಲ್ಲೂಕುಗಳಲ್ಲಿ ಕಳೆದ ೨ ವರ್ಷಗಳಿಂದ ಅತಿವೃಷ್ಠಿ ಹಾಗೂ ಅನಾವೃಷ್ಠಿಯಿಂದಾದ ಬೆಳೆ ಹಾಗೂ ಪ್ರಾಣ ಹಾನಿ ಪ್ರಕರಣಗಳು ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಕಲಬುರಗಿ ಕಂದಾಯ ವಿಭಾಗ ಹಾಗೂ ಹರಪನಹಳ್ಳಿ ತಾಲ್ಲೂಕುಗಳಲ್ಲಿ ಅತಿವೃಷ್ಠಿ ಹಾಗೂ ಅನಾವೃಷ್ಠಿಗಳಿಂದ ಆದ ಹಾನಿಗೆ ಪರಿಹಾರ ನೀಡಲಾಗಿದೆಯೇ; (ಜಿಲ್ಲಾವಾರು ಹಾಗೂ ಎಕರೆವಾರುಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಅತಿವೃಷ್ಠಿ ಹಾಗೂ ಅನಾವೃಷ್ಠಿಗಳಿಂದಾದ ಹಾನಿಯ ಬಗ್ಗೆ ಸರಿಯಾದ ಸಮೀಕ್ಷೆ ನಡೆಸದೆ ಪರಿಹಾರದಲ್ಲಿಯೂ ತಾರತಮ್ಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರವಾದ ಮಾಹಿತಿ ನೀಡುವುದು)

(ಈ) ಬಂದಿದ್ದಲ್ಲಿ, ಕೂಡಲೇ ಸಮೀಕ್ಷೆ ನಡೆಸಿ ನ್ಯಾಯಯುತವಾದಂತ ಪರಿಹಾರ ನೀಡಲು ಸರ್ಕಾರ ಮುಂದಾಗುವುದೇ; ಹಾಗಿದ್ದಲ್ಲಿ, ಸರ್ಕಾರದ ಮುಂದಿರುವ ಯೋಜನೆಗಳೇನು? (ವಿವರ ನೀಡುವುದು)

## ಉದ್ಯೋಗ ಮೇಳ ನಡೆಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) –**

೩೯೭೭ (೪೬೦೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ವಿಭಾಗ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಕೌಶಾಲ್ಯಾಭಿವೃದ್ಧಿ, ಉದ್ಯಮಶೀಲ ಹಾಗೂ ಜೀವನೋಪಾಯ ಇಲಾಖೆಯಲ್ಲಿ ಕೈಗೊಂಡ ಯೋಜನೆಗಳೇನು ಹಾಗೂ ಕಾರ್ಯಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಆ) ಕಲಬುರಗಿ ವಿಭಾಗ ಹಾಗೂ ಹರಪನಹಳ್ಳಿಯಲ್ಲಿ ಇಲಾಖೆಯ ಕಾರ್ಯಕ್ರಮದಡಿಯಲ್ಲಿ ಪದವೀಧರರಿಗಾಗಿ ಉದ್ಯೋಗ ಮೇಳಗಳು ಹಾಗೂ ಇತರೆ ಕಾರ್ಯಕ್ರಮಗಳ ಅಡಿಯಲ್ಲಿ ನೋಂದಾಯಿತ ಪದವೀಧರರೆಷ್ಟು; ಈ ನಿಟ್ಟಿನಲ್ಲಿ ಬಹಳಷ್ಟು ಪದವೀಧರರಿಗೆ ಮಾಹಿತಿ ಹಾಗೂ ಪ್ರಚಾರ ಮುಟ್ಟದೆ ಇರುವುದರಿಂದ ನಿರುದ್ಯೋಗ ಸಮಸ್ಯೆ ಗಂಭೀರವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಕಾರಣಗಳೊಂದಿಗೆ ವಿವರ ನೀಡುವುದು;

(ಇ) ಸದರಿ ಪ್ರದೇಶದಲ್ಲಿ ಇಲಾಖೆಯಡಿಯಲ್ಲಿ ಉದ್ಯೋಗ ಮೇಳಗಳು ಹಾಗೂ ಇತರ ಕಾರ್ಯಕ್ರಮಗಳು ಯಾವ ಕಾಲಮಿತಿಯೊಳಗೆ ಮಾಡಲಾಗುವುದು? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ತುಂಡು ಗುತ್ತಿಗೆ ಕಾಮಗಾರಿಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) –**

೩೯೭೮ (೪೬೦೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಡಿಯಲ್ಲಿ ಕಳೆದ ३ ವರ್ಷಗಳಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ತಲಾ ರೂ.೫.೦೦ ಲಕ್ಷದವರೆಗೂ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಕಾಮಗಾರಿಗಳ ಒಟ್ಟು ಮೊತ್ತವೆಷ್ಟು; ಈ ಕಾಮಗಾರಿಗಳು ಯಾವ ಯಾವ ಅಧಿಕಾರಿಗಳಿಂದ ಅನುಮೋದನೆಗೊಂಡಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ಕಾಮಗಾರಿಗಳನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಮುಕ್ತಾಯಗೊಂಡಿರುವ ಹಾಗೂ ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸದರಿ ಕಾಮಗಾರಿಗಳಿಗೆ ಅನುಮೋದನೆ ನೀಡುವಲ್ಲಿ ಅನುಸರಿಸುವ ಮಾರ್ಗಸೂಚಿಗಳು ಹಾಗೂ ನೀತಿ ನಿಯಮಗಳೇನು? (ಸಂಪೂರ್ಣ ವಿವರ ನೀಡುವುದು)

## ಬಾಲಕಾರ್ಮಿಕರ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೭೯ (೪೫೪೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಬಾಲಕಾರ್ಮಿಕರ ಬಗ್ಗೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಬಾಲ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಬಡ ಕುಟುಂಬಗಳ ಬಡತನವೇ ಬಾಲಕಾರ್ಮಿಕರ ಗಣನೀಯ ಸಂಖ್ಯೆಗೆ ಕಾರಣವಾಗಿರುವುದು ನಿಜವೇ; ಹಾಗಿದ್ದಲ್ಲಿ, ಇದನ್ನು ತೊಡೆದುಹಾಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ಬಾಲ ಕಾರ್ಮಿಕರ ಆರೋಗ್ಯದ ಹಿತರಕ್ಷಣೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಹನಿ ನೀರಾವರಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೦ (೪೫೪೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಹನಿ ನೀರಾವರಿಗೆ ಮಂಜೂರಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಮಂಡ್ಯ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ನಡೆದ ಹನಿ ನೀರಾವರಿ ಕಾಮಗಾರಿಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)

ಇ) ಮಂಡ್ಯ ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಈ) ಮಂಡ್ಯ ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯಡಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತಪ್ಪಿತಸ್ಥರ ಮೇಲೆ ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)

## ಅರಣ್ಯ ಪ್ರೇರಕರುಗಳಾಗಿ ಕಾರ್ಯನಿರ್ವಹಿಸುತ್ತಿರುವವರ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೧ (೪೫೪೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿ ಕಳೆದ ೫ ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಅರಣ್ಯ ಪ್ರೇರಕರುಗಳಾಗಿ ಕಾರ್ಯನಿರ್ವಹಿಸುತ್ತಿರುವವರ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಈ ಅರಣ್ಯ ಪ್ರೇರಕರುಗಳನ್ನು ಯಾವ ನಿಬಂಧನೆಗಳ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ; (ವಿವರ ನೀಡುವುದು)

ಇ) ಈ ಅರಣ್ಯ ಪ್ರೇರಕರುಗಳಿಗೆ ಕಳೆದ ೫ ವರ್ಷಗಳಿಂದ ಮಾಹೆಯಾನ ಎಷ್ಟು ವೇತನ ನಿಗಧಿಪಡಿಸಲಾಗಿದೆ; (ವಿವರ ನೀಡುವುದು)

ಈ) ಈ ಅರಣ್ಯ ಪ್ರೇರಕರುಗಳಾಗಿ ಹೆಚ್ಚಿನವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ವಯೋಮಿತಿ ಮೀರುತ್ತಿರುವ ಬಡ ನೌಕರರುಗಳೇ ಹೆಚ್ಚಾಗಿರುವುದರಿಂದ ಇವರುಗಳನ್ನು ಸರ್ಕಾರ ಖಾಯಂಗೊಳಿಸಿ, ಆದೇಶ ಮಾಡಲು ಚಿಂತಿಸಿದೆಯೇ; (ಹಾಗಿದ್ದಲ್ಲಿ, ವಿವರ ನೀಡುವುದು)

ಉ) ಹಾಗಿಲ್ಲದಿದ್ದಲ್ಲಿ ಇವರುಗಳಿಗೆ ನೀಡುವ ವೇತನವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

## ಕರ್ನಾಟಕ ಹೌಸಿಂಗ್ ಬೋರ್ಡ್‌ನ ಮನೆ ಮತ್ತು ನಿವೇಶನದ ಬಗ್ಗೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೨ (೪೫೪೬) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ವಸತಿ ಮಂಡಳಿಯ ವತಿಯಿಂದ ಕಳೆದ ನಾಲ್ಕು ವರ್ಷಗಳಲ್ಲಿ ನಿರ್ಮಿಸಲಾಗಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ೪ ವರ್ಷಗಳಲ್ಲಿ ಹಂಚಿಕೆಯಾಗಿರುವ ವಸತಿ ಗೃಹಗಳೆಷ್ಟು; ಬಾಕಿ ಉಳಿದಿರುವ ವಸತಿ ಗೃಹಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ವಸತಿ ಮತ್ತು ನಿವೇಶನಗಳ ಈಗಿನ ದರವೇನು; (ವಿವರ ನೀಡುವುದು)

(ಈ) ಜನ ಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ವಸತಿ ನಿವೇಶನ ಪಡೆಯಲು ಸರ್ಕಾರ ಅವಕಾಶ ಮಾಡಿಕೊಡುವುದೇ; (ವಿವರ ನೀಡುವುದು)

(ಉ) ಮಂಡ್ಯ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಹಂಚಿಕೆಯಾಗಿರುವ ವಸತಿ ನಿವೇಶನಗಳ ಸಂಖ್ಯೆ ಎಷ್ಟು; ಫಲಾನುಭವಿಗಳ ಹೆಸರು, ವಿಳಾಸದೊಂದಿಗೆ ತಾಲ್ಲೂಕುವಾರು ವಿವರ ನೀಡುವುದು?

## ಭೂ ಸರ್ವೇಯರುಗಳ ಕೆಲಸ ನಿರ್ವಹಣೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೩ (೪೫೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಭೂ ಸರ್ವೇಯರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಭೂಸರ್ವೇಯರುಗಳ ಎಷ್ಟು ಹುದ್ದೆಗಳು ಖಾಲಿ ಇವೆ; (ಜಿಲ್ಲಾವಾರು ವಿವರ ನೀಡುವುದು)

(ಇ) ರೈತರು, ನಾಗರಿಕರು ಭೂ ಸರ್ವೆಗೆ ಅರ್ಜಿ ಹಾಕಿ ವರ್ಷ ವರ್ಷಗಳೇ ಕಳೆದರೂ ಭೂ ಸರ್ವೇ ಕಾರ್ಯದಲ್ಲಿ ವಿಳಂಬವಾಗಲು ಕಾರಣಗಳೇನು; ಸರ್ವೇಯರುಗಳು ಇದಕ್ಕೆ ಮುಖ್ಯವಾಗಿ ಹೊಣೆಗಾರರಲ್ಲವೇ; ಹಾಗಿದ್ದಲ್ಲಿ, ಅಂತಹ ಸರ್ವೇಯರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಈ) ನಾಗರಿಕರು, ರೈತರುಗಳಿಂದ ಸರ್ವೇಯರುಗಳು ಲಂಚಕ್ಕೆ ಕೈ ನೀಡಿ ಸರ್ವೇ ಕಾರ್ಯದಲ್ಲಿ ಅನಗತ್ಯ ವಿಳಂಬಮಾಡಿ, ಕಛೇರಿಗೆ ವರ್ಷಗಟ್ಟಲೇ ಅಲೆದರೂ ಸರ್ವೇಕಾರ್ಯ ಮಾಡಿಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಅಂತಹ ಸರ್ವೇಯರು ಸರ್ವೇ ಅಧಿಕಾರಿಗಳ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು? (ವಿವರ ನೀಡುವುದು)

## ಅನುದಾನಿತ ಐ.ಟಿ.ಐ ಸಿಬ್ಬಂದಿಗಳ ಪಿಂಚಣಿ ಸೌಲಭ್ಯ ಕುರಿತು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

ಽ೯ಲಳ (ಳಙ೯ಲ) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಥಾಮಸ್ ವರದಿಯನ್ವಯ ರಾಜ್ಯದ ಖಾಸಗಿ ಐ.ಟಿ.ಐ ಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಲಾಗಿದೆಯೇ; (ಸರ್ಕಾರಿ ಆದೇಶದ ದಿನಾಂಕ ತಿಳಿಸುವುದು)

(ಆ) ಥಾಮಸ್ ವರದಿಯನ್ವಯ ರಾಜ್ಯದ ಅನುದಾನಿತ ಐ.ಟಿ.ಐ ಸಿಬ್ಬಂದಿಗಳಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಯಾವ ದಿನಾಂಕದಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ; (ಸರ್ಕಾರಿ ಆದೇಶದ ದಿನಾಂಕ ತಿಳಿಸುವುದು)

(ಇ) ರಾಜ್ಯದ ಅನುದಾನಿತ ಐ.ಟಿ.ಐ ಸಿಬ್ಬಂದಿಗಳಿಗೆ ಇತರೇ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಟಿ, ಸೇವಾ ಭದ್ರತೆ ಇತ್ಯಾದಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆಯೇ;

(ಈ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಸಿಬ್ಬಂದಿಗಳು ನಿವೃತ್ತರಾಗಿದ್ದಾರೆ; ಎಷ್ಟು ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಸೌಲಭ್ಯಗಳನ್ನು ವಿತರಿಸಲಾಗಿದೆ; ಈ ಸಂಬಂಧವಾಗಿ ಎಷ್ಟು ಅರ್ಜಿಗಳು ಇಲಾಖೆಯಲ್ಲಿ ಬಾಕಿ ಇದೆ;

(ಉ) ನಿವೃತ್ತಿ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಅನುದಾನಿತ ಐ.ಟಿ.ಐ ಸಿಬ್ಬಂದಿಗಳ ಅರ್ಜಿಗಳು ಇಲಾಖೆಯಲ್ಲಿ ಬಾಕಿ ಇದ್ದಲ್ಲಿ ಇನ್ನೂ ಜಾರಿ ಮಾಡಿಲ್ಲದಿರುವುದಕ್ಕೆ ಕಾರಣ ಏನು?

## ಆಶ್ರಯ ಮನೆಗಳ ಮಂಜೂರಾತಿ

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೫ (೪೫೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕು, ತಾಂಬಾ ಗ್ರಾಮ, ರಿ.ಸ.ನಂ.೩೨/೧ ಕ್ಷೇತ್ರ ೫ ಎಕರೆ ೧೮ ಗುಂಟೆ ಪೈಕಿ ೩ ಎಕರೆ ೨೦ ಗುಂಟೆ ಜಮೀನನ್ನು ಕರ್ನಾಟಕ ಸರ್ಕಾರದ ಘನತೆವೆತ್ತ ಗೌರವಾನ್ವಿತ ರಾಜ್ಯಪಾಲರ ಹೆಸರಿನಲ್ಲಿ ದಾನ ಪತ್ರ ಮಾಡಿ, ಸರ್ಕಾರದ ಆಶ್ರಯ ಮನೆಗಳನ್ನು ಮಂಜೂರಾತಿ ನೀಡಿ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಬೇರೆ ಖಾಸಗಿ ವ್ಯಕ್ತಿಗೆ ಕಾನೂನು ಬಾಹಿರವಾಗಿ ಮಾರಾಟ ಮಾಡಿದ್ದು, ಸದರಿ ಆಸ್ತಿಯನ್ನು ಪಡೆದುಕೊಂಡಿರುವ ವ್ಯಕ್ತಿ ಆಶ್ರಯ ಮನೆಗಳನ್ನು ಕಟ್ಟಿಕೊಂಡಿರುವ ೮೨ ಫಲಾನುಭವಿಗಳಿಗೆ ಕಿರುಕಳ ನೀಡಿ, ಬೆದರಿಕೆ ಒಡ್ಡಿ ಸ್ಥಳ ಬಿಟ್ಟು ಹೋಗುವಂತೆ ದಿನನಿತ್ಯ ತೊಂದರೆ ನೀಡುತ್ತಿದ್ದಾರೆಂಬ ಗಂಭೀರ ಆರೋಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಜಮೀನು ಮಾರಾಟ ಮಾಡಿದವರ ಹಾಗೂ ತೆಗೆದುಕೊಂಡವರ ವಿರುದ್ಧ ಸರ್ಕಾರವು ಶಿಸ್ತು ಕ್ರಮ ತೆಗೆದುಕೊಂಡು ಬಡ ಕುಟುಂಬಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಯಾವ ಕಾಲಮಿತಿಯೊಳಗೆ ಈ ಬಗ್ಗೆ ಕ್ರಮ ಜರುಗಿಸಲಾಗುವುದು? (ವಿವರವಾದ ಮಾಹಿತಿ ನೀಡುವುದು)

## ಸಾಮಾನ್ಯ ವರ್ಗದ ಬಡ ಕುಟುಂಬಗಳಿಗೆ ಹೆಚ್ಚಿಗೆ ಮನೆ ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೮೬ (೪೫೭೩) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜೀವ್‌ಗಾಂಧಿ ವಸತಿ ನಿಗಮದಿಂದ ಬಸವ ವಸತಿ ಯೋಜನೆ ಅಡಿಯಲ್ಲಿ ಸಾಮಾನ್ಯ ವರ್ಗಕ್ಕೂ ಮನೆಗಳ ಬೇಡಿಕೆ ಇದ್ದರೂ ಕಡಿಮೆ ಪ್ರಮಾಣದಲ್ಲಿ ಮನೆಗಳನ್ನು ಹಂಚಿಕೆ ಮಾಡುತ್ತಿದೆ ಎಂಬ ಗಂಭೀರ ಆರೋಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಮನೆಗಳ ಪ್ರಮಾಣವನ್ನು ಹೆಚ್ಚಿಗೆ ಮಾಡುವಲ್ಲಿ ಸರ್ಕಾರ ತೆಗೆದುಕೊಂಡ ದಿಟ್ಟ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)

(ಆ) ಸಾಮಾನ್ಯ ವರ್ಗಕ್ಕೆ ಬಸವ ವಸತಿ ಯೋಜನೆಯಂತೆ, ರಾಜೀವ್ ಗಾಂಧಿ ವಸತಿ ನಿಗಮದಿಂದ ಯಾವುದಾದರೂ ವಿಶೇಷ ಯೋಜನೆ ರೂಪಿಸಿ, ಹೆಚ್ಚಿನ ಪ್ರಮಾಣದಲ್ಲಿ ವಸತಿ ಹಂಚಿಕೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೆ; ಇದ್ದರೆ ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಜಾರಿಗೆ ತರಲಾಗುವುದು; (ವಿವರವಾದ ಮಾಹಿತಿ ನೀಡುವುದು)

(ಇ) ಹೆಚ್ಚಿನ ಸಂಖ್ಯೆಯ ಬಡ ಕುಟುಂಬಗಳಿಗೆ ಸರ್ಕಾರವು ಮಂಜೂರು ಮಾಡಿದ ಮನೆಯನ್ನು ಕಟ್ಟಿಕೊಳ್ಳಲು ಹಲವಾರು ತೊಂದರೆ ಅನುಭವಿಸುತ್ತಿದ್ದ ಬಡ ಕುಟುಂಬಗಳಿಗೆ ನಿವೇಶನವನ್ನು ನೀಡಿ, ಮನೆಕಟ್ಟಿಕೊಡುವ ಯೋಜನೆ ಸರ್ಕಾರದ ಮುಂದಿದೆಯೆ; ಇದ್ದರೆ ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಜಾರಿಗೆ ತರಲಾಗುವುದು? (ವಿವರವಾದ ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಕ್ರೀಡೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)** –

೩೯೮೭ (೪೫೭೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಕ್ರೀಡೆಗಳ (Sports) ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಆ) ರಾಯಚೂರು ಜಿಲ್ಲೆಯಲ್ಲಿ ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಏತನೀರಾವರಿ ಹಾಗೂ ಕೆರೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)** –

೩೯೮೮ (೪೫೭೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಕೆರೆಗಳನ್ನು ಅಭಿವೃದ್ಧಿ ಮಾಡಲು ಸರಕಾರ ಒದಗಿಸಿರುವ ಅನುದಾನ ಎಷ್ಟು;

(ಆ) ರಾಯಚೂರು ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಜಿಲ್ಲೆಯ ಕೃಷ್ಣಾ ಮತ್ತು ತುಂಗಾಭದ್ರಾ ನದಿದಡದಲ್ಲಿರುವ ಸರಕಾರಿ ಏತ ನೀರಾವರಿ ಯೋಜನೆಗಳು ರೈತರ ಉಪಯೋಗಕ್ಕೆ ಇಲ್ಲದೆ ಇರುವುದು ಸರಕಾರದ ಗಮನಕ್ಕೆ ಬಂದಿಯೇ; ಹಾಗಿದ್ದಲ್ಲಿ, ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

## ರಾಯಚೂರು ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೮೯ (೪೫೭೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವಂತಹ ಭೂಮಿ ಎಷ್ಟು;

(ಆ) ರಾಯಚೂರು ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಮಾಡಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಮಾನ್ವಿ ಪಟ್ಟಣದಲ್ಲಿ ಮಂಜೂರಾತಿಗಿರುವ 'ಟ್ರೀ ಪಾರ್ಕ್' (Tree park) ಅಭಿವೃದ್ಧಿ ಮಾಡಲು ಸರಕಾರ ನೀಡಿರುವ ಅನುದಾನ ಎಷ್ಟು?

## ನೂತನ ತಾಲ್ಲೂಕುಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೦ (೪೫೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೂತನ ತಾಲ್ಲೂಕುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಆ) ರಾಯಚೂರು ಜಿಲ್ಲೆಯಲ್ಲಿ ೨೦೧೩–೧೪ ರಿಂದ ಇಲ್ಲಿಯವರೆಗೂ ಬಡವರಿಗೆ ಹಂಚಿಕೆಯಾಗಿರುವ ಭೂ ಅನುದಾನ (Land Grant) ಎಷ್ಟು; ಈ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

## ರಾಯಚೂರು ತಾಲ್ಲೂಕಿನಲ್ಲಿರುವ ೨೨ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೧ (೪೫೭೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) NRBC ಯಿಂದ ೯A ಉಪ ಕಾಲುವೆ (ವಡವಟ್ಟಿ ಬ್ರ್ಯಾಂಚ್) ನಿರ್ಮಾಣ ಮಾಡಲು ಸರಕಾರ ತೆಗೆದುಕೊಂಡಿರುವ ಕ್ರಮವೇನು;

(ಆ) ಇಲ್ಲಿಯವರೆಗೂ ವಡವಟ್ಟಿ ಬ್ರ್ಯಾಂಚ್ ಕಾಮಗಾರಿ ಮುಗಿಯದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರೈಸಲಾಗುವುದು; ಈ ನಿಟ್ಟಿನಲ್ಲಿ ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ೯A ಕೆನಾಲ್ ಮುಖಾಂತರ ಮಾನ್ವಿ ತಾಲ್ಲೂಕಿನಲ್ಲಿ ಬರುವ ನವಲ್‌ಕಲ್ಲ, ನಾರಬಂಡೆ ಕಲ್ಮಗೇರಾ, ಕೆರಗಳಿಗೆ ನೀರು ತುಂಬಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

(ಈ) NRBC ಕೆನಾಲ್ ಮುಖಾಂತರ ರಾಯಚೂರು ತಾಲ್ಲೂಕಿನಲ್ಲಿ ಬರುವ ಜಿಲ್ಲಾ ಪಂಚಾಯತ್ ಮತ್ತು ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ೨೨ ಕೆರೆಗಳಿಗೆ ನೀರು ತುಂಬಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

## ವಿಜ್ಞಾನ ಗುಡ್ಡ ಯೋಜನೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೩೯೯೨ (೪೫೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ವಿಜ್ಞಾನ ಗುಡ್ಡ ಯೋಜನೆಯನ್ನು ಎಂದಿನಿಂದ ರಾಜ್ಯದಲ್ಲಿ ಪ್ರಾರಂಭಿಸಲಾಯಿತು;

(ಆ) ರಾಜ್ಯದಲ್ಲಿ ಹಾಲಿ ಎಷ್ಟು ವಿಜ್ಞಾನ ಗುಡ್ಡಗಳಿವೆ; ಜಿಲ್ಲಾವಾರು ಮಾಹಿತಿ ಕೊಡುವುದು;

(ಇ) ಈ ವಿಜ್ಞಾನ ಗುಡ್ಡಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೂ ಬಂದ ಹಣವೆಷ್ಟು; ಖರ್ಚಾಗಿರುವುದು ಎಷ್ಟು; ಯಾವ ಯಾವ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ; ಬಾಕಿ ಉಳಿದಿರುವುದು ಎಷ್ಟು; (ವಿವರವಾದ ಮಾಹಿತಿ ಕೊಡುವುದು)

(ಈ) ಈ ವಿಜ್ಞಾನ ಗುಡ್ಡಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಕೊಡುಗೆ ಏನು;

(ಉ) ತುಮಕೂರು ಜಿಲ್ಲೆಯಲ್ಲಿ ವಿಜ್ಞಾನ ಗುಡ್ಡವನ್ನಾಗಿ ಯಾವ ಬೆಟ್ಟವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ; ಇಲ್ಲಿಯವರೆಗೂ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ವಿವರವಾದ ಮಾಹಿತಿ ಕೊಡುವುದು)

## ಜಿಲ್ಲಾಧಿಕಾರಿಗಳ ಬ್ಯಾಂಕ್ ಖಾತೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೩೯೯೩ (೪೫೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಿಲ್ಲೆಗಳು ಎಷ್ಟು; ಸದರಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾಧಿಕಾರಿಗಳು ಯಾರು ಯಾರು; ವಿವರವಾಗಿ ಹೆಸರು, ದೂರವಾಣಿ ಸಂಖ್ಯೆ ಮತ್ತು ಇ ಮೇಲ್ ವಿಳಾಸದೊಂದಿಗೆ ಮಾಹಿತಿ ಕೊಡುವುದು;

(ಆ) ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಸಮಿತಿಗಳು/ಯೋಜನೆಗಳು/ ಕೇಂದ್ರ ಪುರಸ್ಕೃತ ಯೋಜನೆಗಳು ಎಷ್ಟು; ಅವು ಯಾವುವು; ವಿವರವಾಗಿ ಸಮಿತಿ/ಯೋಜನೆವಾರು ಮಾಹಿತಿ ಕೊಡುವುದು;

(ಇ) ಈ ಸಮಿತಿ/ಯೋಜನೆಗಳು ಯಾವಾಗಿನಿಂದ ಕಾರ್ಯನಿರ್ವಹಿಸುತ್ತಿವೆ; ಇವುಗಳ ಕರ್ತವ್ಯಗಳೇನು;

(ಈ) ಸದರಿ ಸಮಿತಿ/ಯೋಜನೆಗಳಿಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳಿಂದ ಕಳೆದ ೩ ವರ್ಷಗಳಿಂದ ಎಷ್ಟು ಹಣ ಬಂದಿದೆ; ಖರ್ಚಾಗಿರುವ ಹಣ ಎಷ್ಟು; ಬಾಕಿ ಉಳಿದಿರುವ ಹಣವೆಷ್ಟು; (ವಿವರವಾದ ಮಾಹಿತಿ ಕೊಡುವುದು)

(ಉ) ಒಂದು ಜಿಲ್ಲೆಯ ಜಿಲ್ಲಾಧಿಕಾರಿ ಹೆಸರಿನಲ್ಲಿ ಎಷ್ಟು ಬ್ಯಾಂಕ್ ಖಾತೆ ಮತ್ತು ಲೆಕ್ಕ ಶೀರ್ಷಿಕೆಗಳು ಇರುತ್ತವೆ; ಯಾವ ಯಾವ ಯೋಜನಾವಾರು ವಿವರವಾದ ಮಾಹಿತಿ ಕೊಡುವುದು;

(ಊ) ಜಿಲ್ಲಾಧಿಕಾರಿಗಳ ಪಿ.ಡಿ ಖಾತೆ ಅಂದರೇನು; ಈ ಖಾತೆಗೆ ಯಾವ ಯಾವ ಯೋಜನೆಗಳ ಹಣವನ್ನು ಜಮಾ ಮಾಡಲಾಗುವುದು?

## ಆನೆಗಳ ಹಾವಳಿ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೩೯೯೪ (೪೫೯೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಕಲೇಶಪುರ ತಾಲ್ಲೂಕು, ಪಶ್ಚಿಮ ಘಟ್ಟದ ಅಂಚಿನಲ್ಲಿರುವ ಬಿಸಲೆ ರಕ್ಷಿತಾರಣ್ಯ ಮತ್ತು ಕಾಗಿನೆಲೆ ಅರಣ್ಯ ಪಕ್ಕದ ಆನೆ ಕಾರಿಡಾರ್ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ ಎಷ್ಟು; ಯಾವುವು;

(ಆ) ಸದರಿ ಗ್ರಾಮಗಳ ರೈತರು ಆನೆಗಳ ಹಾವಳಿಯಿಂದ ತೀವ್ರ ತೊಂದರೆಗೊಳಗಾಗಿ ತಮ್ಮ ಬದುಕು ಸಾಗಿಸಲು ಸಾಧ್ಯವಿಲ್ಲವೆಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುವುದು ನಿಜವೇ;

(ಇ) ಹಾಗಿದ್ದರೆ, ಮಾನ್ಯ ಮುಖ್ಯಮಂತ್ರಿಗಳು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)

(ಈ) ಈ ರೈತರು ಕಾಡು ಪ್ರಾಣಿಗಳ ಹಾವಳಿಯಿಂದ ಜಮೀನು ಉಳುಮೆ ಮಾಡಲಾಗದೆ ಹಾಳು ಬಿಟ್ಟಿರುವುದು ನಿಜವೇ; ಅವರಿಗೆ ವಾರ್ಷಿಕ ಪರಿಹಾರ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಉ) ಕಾಂಪಾ ನಿಧಿ ಅಂದರೇನು; ಇದನ್ನು ಕೇಂದ್ರದಿಂದ ಯಾವಾಗ ಪಡೆದುಕೊಳ್ಳಲಾಗುವುದು; ಇದರ ಸಂಬಂಧ ಇಲ್ಲಿಯವರೆಗೂ ಸರ್ಕಾರ ಯಾವ ಪ್ರಯತ್ನ ನಡೆಸಲಾಗಿದೆ?

## ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯೭ (೪೪೧೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಸಂಘಟಿತ ವಲಯದಲ್ಲಿ ಬರುವ ಕಾರ್ಮಿಕ ವರ್ಗಗಳು ಯಾವುವು; (ವಿವರ ನೀಡುವುದು)

(ಆ) ಅಸಂಘಟಿತ ವಲಯಗಳ ಕಾರ್ಮಿಕರಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವುವು; ಈ ಯೋಜನೆಗೆ ಸರ್ಕಾರ ಒದಗಿಸಿರುವ ಅನುದಾನ ಮತ್ತು ಖರ್ಚು ಮಾಡಿರುವ ಅನುದಾನ ಎಷ್ಟು; (ಯೋಜನೆವಾರು ವಿವರ ನೀಡುವುದು)

ಇ) ಅಸಂಘಟಿತ ಕಾರ್ಮಿಕರ ಶೋಷಣೆಯನ್ನು ತಪ್ಪಿಸಲು ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ?

## ಅತಿವೃಷ್ಠಿ, ಅನಾವೃಷ್ಠಿಗೆ ಕೇಂದ್ರದ ಅನುದಾನ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯೬ (೪೪೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತಿವೃಷ್ಠಿ, ಅನಾವೃಷ್ಠಿಯಾಗಿ ತೀವ್ರತರವಾದ ತೊಂದರೆಯುಂಟಾದಾಗ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಅನುದಾನ ನೀಡುತ್ತಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನೀಡಿರುವ ಅನುದಾನ ಎಷ್ಟು; ರಾಜ್ಯ ಸರ್ಕಾರ ಮನವಿ ಮಾಡಿದ ಹಣದ ಮೊತ್ತ ಎಷ್ಟು; ಖರ್ಚು ಮಾಡಿದ ಹಣ ಎಷ್ಟು?

## ಸರ್ವೇಯರುಗಳ ಕೊರತೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯೭ (೪೪೧೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಸರ್ವೇಯರ್‌ಗಳ ಕೊರತೆಯಿಂದ ರೈತರ ಜಮೀನಗಳ ಸರ್ವೇ ಪೋಡಿ ಮಾಡುವ ಕೆಲಸ ನಿಧಾನವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಭೂಮಾಪನಾ ಇಲಾಖೆಯಲ್ಲಿ ಹಣ ನೀಡಿದಲ್ಲಿ ಮಾತ್ರ ರೈತರ, ಸಾರ್ವಜನಿಕರ ಕೆಲಸ ಕಾರ್ಯಗಳಾಗುತ್ತಿವೆ ಎಂಬ ದೂರಿದ್ದು, ಇದನ್ನು ದೂರ ಮಾಡಿ ಬೇಗ ಕೆಲಸ ಕಾರ್ಯಗಳಾಗುವಂತೆ ಮಾಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ?

## ಅರಣ್ಯ ಕಾಮಗಾರಿಯಲ್ಲಿ ಅವ್ಯವಹಾರ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯೮ (೪೪೮೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆನರಾ ವೃತ್ತದ ಹಳಿಯಾಳ ವಿಭಾಗದ ವ್ಯಾಪ್ತಿಗೆ ಬರುವ ದಾಂಡೇಲಿ ಅರಣ್ಯ ವಲಯದ ಉಸೋಡಾ ಅರಣ್ಯದಲ್ಲಿ ೩೦ ಹೆಕ್ಟೇರ್ ಪ್ರದೇಶದಲ್ಲಿ ನಡೆದಿರುವ ಅಕೇಶಿಯಾ ನೆಡತೋಪಿನಲ್ಲಿ ಭಾರೀ ಪ್ರಮಾಣದ ಗೋಲ್‌ಮಾಲ್ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಸದರಿ ಅರಣ್ಯ ಪ್ರದೇಶದಲ್ಲಿ ಈ ಹಿಂದೆ ಬೆಳೆಸಿರುವ ಅಕೇಶಿಯಾ ಮರಗಳನ್ನು ಕಟಾವು ಮಾಡಿ ಅದೇ ಸ್ಥಳದಲ್ಲಿ ಪುನ: ಅಕೇಶಿಯಾ ಸಸಿಗಳನ್ನು ಬೆಳೆಸಬೇಕೆಂದಿದ್ದರೂ ಸದರಿ ಆದೇಶ ಗಾಳಿಗೆ ತೂರಿ ೩೦ ಹೇಕ್ಟರ್ ಪ್ರದೇಶದಲ್ಲಿ ೫% ರಷ್ಟು ಪ್ರದೇಶದಲ್ಲಿನ ಮರಗಳನ್ನು ಕಡಿದು ಉಳಿದ ೨೫% ಪ್ರದೇಶದ ಕಟಾವು ಕಾರ್ಯ ಬಾಕಿ ಇರಿಸಿ ಎಲ್ಲಾ ಮರಗಳನ್ನು ಕಡಿಯಲಾಗಿದೆ ಎಂದು ಹೇಳಿ ಗುತ್ತಿಗೆದಾರರಿಗೆ ಇಲಾಖೆಯಿಂದ ಹಣ ಪಾವತಿಸಿ ಅವ್ಯವಹಾರ ಮಾಡಿರುವ ಬಗ್ಗೆ ಲೋಕಾಯುಕ್ತರಿಂದ ಸೂಕ್ತ ತನಿಖೆ ಮಾಡಿಸಲಾಗುವುದೇ? (ವಿವರ ನೀಡುವುದು)

## ಅರಣ್ಯ ಹಕ್ಕು ಸಮಿತಿಯಿಂದ ಮನೆ ಮಂಜೂರು ಕುರಿತು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯ (೪೪೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಸಮಿತಿಯಿಂದ ಬಡವರು ತಮ್ಮ ಮನೆ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿ ಈಗಾಗಲೇ ವರ್ಷ ಕಳೆದರು ಈ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಬಹಳಷ್ಟು ಸಭೆ ನಡೆಸಿ ಪ್ರಕರಣ ಇತ್ಯರ್ಥ ಮಾಡಿ ಬಡವರಿಗೆ ಅರಣ್ಯ ಹಕ್ಕು ಸಮಿತಿಯಿಂದ ನಿವೇಶನ ಹಂಚಿಕೆ ಪ್ರಕ್ರಿಯೆಗೆ ಕೊನೆಯ ಹಂತದಲ್ಲಿ ಜಿಲ್ಲಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಎಲ್ಲಾ ಪ್ರಕರಣಗಳನ್ನು ಹಾಗೆಯೇ ಇಟ್ಟಿರುವುದು ಸರಕಾರದ ಗಮನಕ್ಕೆ ಬಂದಿರುತ್ತದೆಯೇ; (ವಿವರ ನೀಡುವುದು)

(ಆ) ಈಗಾಗಲೇ ಈ ನಿವೇಶನ ಬಗ್ಗೆ ಬಹಳಷ್ಟು ತಾಲ್ಲೂಕು ಮಟ್ಟದಲ್ಲಿ ಪ್ರಕರಣ ತಯಾರಿಸಿ ವಿಭಾಗೀಯ ಮಟ್ಟಕ್ಕೆ ಕಳುಹಿಸಿದ್ದರೂ ಅದನ್ನು ಪರಿಶೀಲಿಸದೇ ಯಾವುದೇ ರೀತಿಯಲ್ಲಿ ನಿರ್ಣಯ ಕೈಗೊಳ್ಳದೇ

ಇಟ್ಟಿರುವುದರಿಂದ ಬಡ ಜನರಿಗೆ ತೊಂದರೆಯಾಗಿದ್ದು, ಈ ಬಗ್ಗೆ ವಿಭಾಗಿಯ ಮಟ್ಟದಲ್ಲಿ ಬಂದಿರುವ ಪ್ರಕರಣ ಇತ್ಯರ್ಥಪಡಿಸಲು ಎಷ್ಟು ಕಾಲಾವಕಾಶ ಬೇಕಾಗಬಹುದು; ಜಿಲ್ಲಾವಾರು/ತಾಲ್ಲೂಕುವಾರು ಪ್ರಕರಣಗಳ ಸವಿಸ್ತಾರ ವರದಿ ನೀಡುವುದು?

## ಅರಣ್ಯ ಇಲಾಖೆಯಿಂದ ನೆಡಲಾದ ಸಸ್ಯಗಳ ರಕ್ಷಣೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೦೦೦ (೪೪೨೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಯೋಜನೆಗೆ ಪ್ರತಿವರ್ಷ ಸರ್ಕಾರದಿಂದ ಎಷ್ಟು ಹಣವನ್ನು ವೆಚ್ಚ ಮಾಡಲಾಗುತ್ತಿದೆ;

(ಇ) ಈ ಸಸಿಗಳನ್ನು ರಕ್ಷಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ;

(ಈ) ಕಳೆದ ೩ ವರ್ಷಗಳ ಅವಧಿಯಲ್ಲಿ ನೆಡಲಾದ ಒಟ್ಟು ಸಸ್ಯಗಳಲ್ಲಿ ಎಷ್ಟನ್ನು ರಕ್ಷಣೆ ಮಾಡಿ ಬೆಳೆಸಲಾಗಿದೆ?

## ರಾಜ್ಯದಲ್ಲಿ ಮೋಡ ಬಿತ್ತನೆ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೦೦೧ (೪೪೨೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೋಡ ಬಿತ್ತನೆ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ;

(ಆ) ಈ ಯೋಜನೆ ಅಡಿ ಈವರೆಗೆ ಖರ್ಚು ಮಾಡಲಾದ ಹಣ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಮೋಡ ಬಿತ್ತನೆ ಕಾರ್ಯಕ್ರಮದಿಂದ ಎಷ್ಟರ ಮಟ್ಟಿಗೆ ಹೆಚ್ಚಿನ ಮಳೆಯನ್ನು ತರಲಾಗಿದೆ; (ವಿವರ ನೀಡುವುದು)

(ಈ) ಈ ಮೋಡ ಬಿತ್ತನೆ ಕಾರ್ಯಕ್ರಮವನ್ನು ಯಾವ ತಿಂಗಳಿಂದ ಆರಂಭವಾಡಲಾಗಿದೆ ಹಾಗೂ ಯಾವ ತಿಂಗಳಿನವರೆಗೆ ಮುಂದುವರೆಸಲಾಗುವುದು?

## ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೦೦೨ (೪೪೨೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚುಗೊಳಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆಯೇ;

ಆ) ಆರಂಭಿಸಿದ್ದರೆ, ಈ ಕಾರ್ಯ ಯಾವ ಹಂತದಲ್ಲಿದೆ; (ವಿವರ ನೀಡುವುದು)

ಇ) ಆರಂಭಿಸದಿದ್ದರೆ, ಇದಕ್ಕೆ ಇರುವ ಕಾರಣಗಳೇನು;

ಈ) ಈ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಮುಳುಗಡೆಯಾಗಲಿರುವ ಒಟ್ಟು ಪ್ರದೇಶದ ವಿಸ್ತೀರ್ಣ ಎಷ್ಟು;

ಉ) ಮುಳುಗಡೆಯಾಗಲಿರುವ ಈ ಪ್ರದೇಶದ ಭೂಸ್ವಾಧೀನ ಕಾರ್ಯ ಯಾವ ಹಂತದಲ್ಲಿದೆ? (ವಿವರ ನೀಡುವುದು)

## ಕಾಡು ಪ್ರಾಣಿಗಳ ಹಾವಳಿ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೦೦೩ (೪೪೨೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ಅರಣ್ಯದಲ್ಲಿನ ಕಾಡು ಪ್ರಾಣಿಗಳು ನಗರ ಪ್ರದೇಶ ಹಾಗೂ ಗ್ರಾಮಗಳಿಗೆ ಪ್ರವೇಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕಾಡು ಪ್ರಾಣಿಗಳಿಂದ ಹಾನಿಗೊಳಗಾದ ಬೆಳೆಗಳ ಮಾಹಿತಿ ಹಾಗೂ ದಾಳಿಗೊಳಗಾದ ಜನರ ವಿವರ ನೀಡುವುದು; ಕಾಡು ಪ್ರಾಣಿಗಳಿಂದ ಉಂಟಾದ ನಷ್ಟಕ್ಕೆ ಸರ್ಕಾರ ಪರಿಹಾರ ನೀಡಿದ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ರೀತಿ ಕಾಡುಪ್ರಾಣಿಗಳು ಅರಣ್ಯದಿಂದ ಜನ ವಸತಿ ಪ್ರದೇಶಗಳಿಗೆ ಬರುವುದನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ವಹಿಸಿದೆ?

## ನೋಂದಣಿ ಹಾಗೂ ಮುಂದ್ರಾಂಕ ಇಲಾಖೆಯ ಕಾರ್ಯವೈಖರಿಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೦೦೪ (೪೫೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತ್ಯಂತ ಹೆಚ್ಚು ಮುದ್ರಾಂಕ ಶುಲ್ಕ ಬರುವ ಜಿಲ್ಲೆ ಯಾವುದು; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಸಬ್–ರಿಜಿಸ್ಟ್ರಾರ್‌ಗಳ ಹುದ್ದೆ ಎಷ್ಟು; ಖಾಲಿ ಇರುವ ಹುದ್ದೆ ಎಷ್ಟು; ಇವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಆಸ್ತಿ ನೋಂದಾವಣಿಯಿಂದ ಒಟ್ಟು ಸಿಗುವ ಆದಾಯವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

## ಕಸ್ತೂರಿ ರಂಗನ್ ವರದಿಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೦೦೫ (೪೫೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಕಸ್ತೂರಿ ರಂಗನ್ ವರದಿಯು ಯಾವ ಹಂತದಲ್ಲಿದೆ; ರಾಜ್ಯದಿಂದ ಸಲ್ಲಿಸಲಾದ ಆಕ್ಷೇಪಣೆಗಳನ್ನು ಕೇಂದ್ರ ಸರ್ಕಾರದ ಗಮನ ಸೆಳೆಯಲು ಕ್ರಮ ಕೈಗೊಳ್ಳುವುದೇ; (ವಿವರ ಒದಗಿಸುವುದು)

ಆ) ಅರಣ್ಯ ಭೂಮಿಯಲ್ಲಿ ವಾಸಿಸುತ್ತಿರುವವರಿಗೆ ಭೂಮಿ ಹಕ್ಕನ್ನು ಪಡೆಯಲು ಇಲಾಖೆ ಕೈಗೊಂಡ ಕ್ರಮವೇನು; ಎಷ್ಟು ಅರ್ಜಿಗಳನ್ನು ಇತ್ಯರ್ಥಗೊಳಿಸಲು ಬಾಕಿ ಇದೆ; (ಜಿಲ್ಲಾವಾರು ವಿವರ ಒದಗಿಸುವುದು)

ಇ) ಅರಣ್ಯ ಭೂಮಿಯಲ್ಲಿ ವಾಸವಾಗಿರುವ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆಗಳನ್ನು ಒದಗಿಸಲು ಇಲಾಖೆ ಕೈಗೊಂಡ ಕ್ರಮವೇನು? (ವಿವರ ಒದಗಿಸುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈಕೋರ್ಟ್ ಸಂಚಾರ ಪೀಠ ಸ್ಥಾಪನೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೦೦೬ (೪೫೫೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರ ಪೀಠ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಹೈಕೋರ್ಟ್‌ಗೆ ಕಾನೂನು ಇಲಾಖೆ ಪ್ರಸ್ತಾವನೆ ಸಲ್ಲಿಸಿದೆಯೇ; ಯಾವ ಯಾವ ಜಿಲ್ಲೆಯನ್ನು ಸೀಮಿತಗೊಂಡು ಹೈಕೋರ್ಟ್ ಸರ್ಕಿಟ್‌ಬೆಂಚ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಪ್ರಸುತ್ತ ಎಷ್ಟು ಸರ್ಕಿಟ್‌ಬೆಂಚ್‌ಗಳು ಕಾರ್ಯನಿರ್ವಹಿಸುತ್ತಿದೆ; ಯಾವ ಯಾವ ಸರ್ಕಿಟ್‌ಬೆಂಚ್‌ಗಳ ವ್ಯಾಪ್ತಿಗೆ ಬರುತ್ತದೆ; (ವಿವರ ಒದಗಿಸುವುದು)

(ಇ) ಹೈಕೋರ್ಟ್ ನ್ಯಾಯಾಧೀಶರುಗಳ ಹುದ್ದೆಗಳು ಖಾಲಿ ಇದ್ದು ಕೇಸ್‌ಗಳು ವಿಲೇವಾರಿ ಆಗುವುದಿಲ್ಲವೆಂಬ ದೂರುಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು)

(ಈ) ರಾಜ್ಯದ ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; ಯಾವ ಯಾವ ಪ್ರಕರಣಗಳು ಬಾಕಿ ಇವೆ? (ವಿವರ ನೀಡುವುದು)

## ರಾಜ್ಯದಲ್ಲಿ ವಕೀಲರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹಿತ ರಕ್ಷಣೆ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

ಳ೦೦೭ (ಳಜಜಜ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಾರ್‌ಕೌನ್ಸಿಲ್‌ಗಳಿಗೆ ಚುನಾವಣೆ ನಡೆಯುದಿರಲು ಕಾರಣವೇನು; (ವಿವರ ಒದಗಿಸುವುದು) ಪ್ರಸ್ತುತ ಬಾರ್‌ಕೌನ್ಸಿಲ್‌ಗಳು ಕಾರ್ಯ ನಿರ್ವಹಿಸುತ್ತಿದೆಯೇ; ಇದ್ದರೆ ವಿವರ ಒದಗಿಸುವುದು;

(ಆ) ರಾಜ್ಯದಲ್ಲಿರುವ ನೋಂದಾಯಿತ ವಕೀಲರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) ನಕಲಿ ವಕೀಲರುಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಇಲಾಖೆ ಯಾವ ಕ್ರಮ ಕೈಗೊಂಡಿದೆ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ವಕೀಲರುಗಳಿಗೆ ವಕೀಲರ ಭವನಗಳನ್ನು ನಿರ್ಮಿಸಲು ಎಷ್ಟು ಅನುದಾನ ಮೀಸಲಿಡಲಾಗಿದೆ; ಎಲ್ಲೆಲ್ಲಿ ವಕೀಲರ ಭವನ ಸ್ಥಾಪಿಸಲಾಗಿದೆ; (ವಿವರ ಒದಗಿಸುವುದು)

(ಈ) ಮಂಗಳೂರಿನಲ್ಲಿ ವಕೀಲರ ಭವನ ಸ್ಥಾಪನೆಗೊಳ್ಳದಿರಲು ಕಾರಣವೇನು; ಮೀಸಲಿಟ್ಟ ಅನುದಾನ ಎಷ್ಟು; ಪ್ರಾರಂಭಗೊಳ್ಳುವುದು ಯಾವಾಗ? (ವಿವರ ಒದಗಿಸುವುದು)

## ನಾಡ ಕಛೇರಿಗಳಲ್ಲಿನ ಅವ್ಯವಹಾರಗಳನ್ನು ತಡೆಯುವ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦೦೮ (೪೩೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಬರುವ ನಾಡ ಕಛೇರಿಗಳೆಷ್ಟು; ಸದರಿ ನಾಡ ಕಛೇರಿಗಳ ವ್ಯಾಪ್ತಿಗೊಳಪಡುವ ಪ್ರದೇಶ/ ವಾರ್ಡುಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ನಾಡ ಕಛೇರಿಗಳಿಗೆ ಅನುಮೋದಿತವಾಗಿರುವ ಹುದ್ದೆಗಳೆಷ್ಟು; ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ಹಾಗೂ ಖಾಲಿಯಿರುವ ಹುದ್ದೆಗಳ ಸಂಪೂರ್ಣ ವಿವರವನ್ನು ನೀಡುವುದು;

(ಇ) ಸದರಿ ಕಛೇರಿಗಳಲ್ಲಿ ಹೊರಗುತ್ತಿಗೆ/ಗುತ್ತಿಗೆಯ ಅಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಈ ಕಛೇರಿಗಳಲ್ಲಿ ನಿರಂತರವಾಗಿ ಅವ್ಯವಹಾರಗಳು ನಡೆಯುತ್ತಿರುವ ಬಗ್ಗೆ ಸಾರ್ವಜನಿಕರು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಈ ಅವ್ಯವಹಾರಗಳನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು?

## ವಸತಿ ಹೀನರಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಲ್ಪಿಸುವ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦೦೯ (೪೩೮೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೩ ರಿಂದ ೨೦೧೬ರ ವರೆಗೆ ವಸತಿ ಹೀನರ ಸಂಖ್ಯೆ ಎಷ್ಟು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಾರ್ಷಿಕವಾರು/ ಜಿಲ್ಲಾವಾರು ವಿವರ ನೀಡುವುದು)

(ಆ) ಆಶ್ರಯ ಯೋಜನೆ ಮನೆಗಳನ್ನು ಯಾವ ಮಾನದಂಡದ ಆಧಾರದ ಮೇರೆಗೆ ಹಂಚಿಕೆ ಮಾಡಲಾಗುತ್ತಿದೆ; ಈ ಬಗ್ಗೆ ಸರ್ಕಾರದ ಆದೇಶದ ಪ್ರತಿಯನ್ನು ನೀಡುವುದು;

(ಇ) ರಾಜ್ಯದಲ್ಲಿ ಆಶ್ರಯ ಮನೆಗಳ ಮಂಜೂರಾತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಈ) ಆಶ್ರಯ ಯೋಜನೆ ಮನೆಗಳನ್ನು ಮಂಜೂರು ಮಾಡುವಾಗ ಸ್ಥಳೀಯ ಶಾಸಕರುಗಳ ಪಾತ್ರವೇನು; (ವಿವರ ನೀಡುವುದು)

(ಉ) ವಿಶೇಷ ಯೋಜನೆಯಡಿಯಲ್ಲಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ಹಾಕಿಕೊಂಡಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?

## ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರುಗಳ ಸೌಕರ್ಯಗಳ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦೧೦ (೪೫೭೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರುಗಳಿಗಾಗಿ ಅನುಷ್ಠಾನಗೊಂಡಿರುವ ಯೋಜನೆಗಳು ಯಾವುವು;

(ಆ) ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರುಗಳ ಕುರಿತು ದಾಖಲಾಗಿರುವ ಜಿಲ್ಲಾ ವಿವರಗಳೇನು;

(ಇ) ರಾಜ್ಯದ ವಿವಿಧ ಜಿಲ್ಲೆಗಳಿಂದ ಬೆಂಗಳೂರು ಮಹಾನಗರಕ್ಕೆ ವಲಸೆ ಬರುವ ಕಾರ್ಮಿಕರ ಯೋಗಕ್ಷೇಮ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ರಾಜ್ಯದಲ್ಲಿ ಕಾರ್ಮಿಕ ಕಾಯ್ದೆಯನ್ವಯ ನಿಗದಿಪಡಿಸಲಾಗಿರುವ ಕಾರ್ಮಿಕರ ಕನಿಷ್ಠ ವೇತನ ಎಷ್ಟು;

(ಉ) ಸರ್ಕಾರ ನಿಗದಿ ಮಾಡಿರುವ ವೇತನದಿಂದ ಕಾರ್ಮಿಕರು ಬೆಂಗಳೂರು ಮಹಾನಗರದಲ್ಲಿ ಜೀವನ ನಡೆಸಲು ಸಾಧ್ಯವೆ; ಹತ್ತು ಸಾವಿರ ರೂಪಾಯಿಗಳ ಕನಿಷ್ಠ ವೇತನ ನಿಗದಿಪಡಿಸಲು ಸರ್ಕಾರಕ್ಕಿರುವ ತೊಂದರೆ ಏನು?

## ಸಾಮಾಜಿಕ ಭದ್ರತೆ ಯೋಜನೆಯಡಿಯಲ್ಲಿ ನೀಡುವ ಮಾಶಾಸನಗಳ ಕುರಿತು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦೧೧ (೪೫೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಸಾಮಾಜಿಕ ಭದ್ರತೆ ಯೋಜನೆಯಡಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನಿ–ಮೈತ್ರಿ ಮಾಶಾಸನ, ವಿಧವಾ ವೇತನ, ಅಂಗವಿಕಲರ ಮಾಶಾಸನ ಹಾಗೂ ಇತರೆ ಮಾಶಾಸನ ಪಡೆಯುತ್ತಿರುವವರಿಗೆ ಸರ್ಕಾರ ವರ್ಗಾವಾರು ನೀಡುತ್ತಿರುವ ಮಾಶಾಸನಗಳೇನು; ವರ್ಗಾವಾರು ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಕಳೆದ ೦೩ ವರ್ಷದಿಂದ ಒಟ್ಟು ವರ್ಗಾವಾರು, ವಾರ್ಷಿಕವಾರು ಮತ್ತು ಜಿಲ್ಲಾವಾರು ಫಲಾನುಭವಿಗಳ ಮಾಹಿತಿ ನೀಡುವುದು;

ಇ) ಮೇಲ್ಕಂಡ ಯೋಜನೆಯಡಿ ಒಟ್ಟು ಮಾಶಾಸನಗಳನ್ನು ಪಡೆಯಲು ಸಲ್ಲಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪುರಸ್ಕೃತಗೊಂಡ ಹಾಗೂ ತಿರಸ್ಕೃತಗೊಂಡ ಅರ್ಜಿಗಳೆಷ್ಟು? (ವರ್ಗಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

## ಚೆಕ್‌ಡ್ಯಾಂಗಳ ದುರಸ್ಥಿ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೧೨ (೪೪೬೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂತರ್ ಜಲ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ ನಿರ್ಮಿಸಿರುವ, ಚೆಕ್‌ಡ್ಯಾಂಗಳನ್ನು ದುರಸ್ಥಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ;

(ಆ) ಇದ್ದಲ್ಲಿ, ಯಾವ ಯಾವ ಯೋಜನೆಗಳಲ್ಲಿ ದುರಸ್ಥಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಇದೆ? (ಮಾಹಿತಿ ನೀಡುವುದು)

## ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೧೩ (೪೪೫೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಬರುವ ಚಾನೆಲ್ ಉದ್ದ ಎಷ್ಟು;

(ಆ) ಈಗಾಗಲೇ ಕಾಮಗಾರಿ ಆರಂಭವಾಗಿರುವ ಚಾನೆಲ್ ಉದ್ದ ಎಷ್ಟು;

(ಇ) ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ?

## ತುಂಗಭದ್ರ ಹಿನ್ನೀರಿನಿಂದ ಕುಡಿಯುವ ನೀರಿನ ಯೋಜನೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೧೪ (೪೪೬೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಂಗಭದ್ರ ಹಿನ್ನೀರಿನ ಕುಡಿಯುವ ನೀರಿನ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಚಳ್ಳಕರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳು ಸೇರುತ್ತವೆ;

(ಆ) ಸದರಿ ಯೋಜನೆ ಯಾವ ಹಂತದಲ್ಲಿದೆ?

## ೨೦೧೬ ಭೂ ಸುಧಾರಣೆ ಕಾಯ್ದೆಯ ಶೀಘ್ರ ಅನುಷ್ಠಾನದ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೧೫ (೪೬೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬ರ ಭೂ ಸುಧಾರಣೆ ಕಾಯ್ದೆ ಯಾವ ದಿನಾಂಕದಿಂದ ಜಾರಿಗೆ ಬರಲಿದೆ; ರಾಜ್ಯ ಪತ್ರದಲ್ಲಿ ಯಾವಾಗ ಪ್ರಕಟಿಸಿದೆ;(ಪ್ರತಿ ಒದಗಿಸುವುದು)

(ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸದರಿ ಕಾಯ್ದೆ ಅನ್ವಯಿಸುವುದೆ; ಇತರೆ ಯಾವ ಯಾವ ಭಾಗಗಳಲ್ಲಿ ಕಾಯ್ದೆ ಜಾರಿಗೆ ಬರಲಿದೆ;

(ಇ) ೨೦೧೬ರ ಹೊಸ ಭೂ ಸುಧಾರಣಾ ಕಾಯ್ದೆ ಅನ್ವಯ ಅರ್ಜಿಗಳನ್ನು ಸ್ವೀಕರಿಸಲು ಪ್ರಾರಂಭಿಸಲಾಗುವುದು ಯಾವಾಗ; ಅರ್ಜಿ ವಿಲೇವಾರಿ ಪ್ರಕ್ರಿಯಗಳೇನು; ಯಾವ ಕಾಲಮಿತಿಯಲ್ಲಿ ನಿವೇಶನವನ್ನು ಮಂಜೂರು ಮಾಡಲಾಗುವುದು;

(ಈ) ಸದರಿ ಕಾಯ್ದೆಯಂತೆ, ಭೂಮಿ ಕಳೆದುಕೊಳ್ಳುವ ಭೂ ಮಾಲೀಕರಿಗೆ ಯಾವ ರೀತಿಯ ಪರಿಹಾರ ಒದಗಿಸಲಾಗುವುದು;

(ಉ) ೨೦೧೬ರ ಭೂ ಸುಧಾರಣಾ ಕಾಯ್ದೆ ಅನುಷ್ಠಾನದ ಪ್ರಾಧಿಕಾರ ಯಾವುದು; ನಿಯೋಜಿತ/ಜವಾಬ್ದಾರಿ ಹೊಂದಿರುವ ಅಧಿಕಾರಿಗಳಾರು; ಅರ್ಜಿ ಸ್ವೀಕರಿಸುವ ಪ್ರಾಧಿಕಾರ ಯಾವುದು; ಅಗತ್ಯ ದಾಖಲೆಗಳೇನು?

## ಎತ್ತಿನ ಹೊಳೆ ಯೋಜನೆ ಅನುಷ್ಠಾನದ ವಿರುದ್ಧ ದಾಖಲಾದ ಪ್ರಕರಣಗಳ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೧೬ (೪೬೦೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಎತ್ತಿನ ಹೊಳೆ ಯೋಜನೆಯ" ಅನುಷ್ಠಾನ ಪ್ರಸ್ತುತ ಯಾವ ಹಂತದಲ್ಲಿದೆ; ಯೋಜನೆಯ ಪರಿಷ್ಕೃತ ಅಂದಾಜು ಯೋಜನಾ ವೆಚ್ಚವೆಷ್ಟು; ಇಲ್ಲಿಯವರೆಗೆ ಖರ್ಚಾದ ಅನುದಾನವೆಷ್ಟು;

(ಆ) “ಎತ್ತಿನ ಹೊಳೆ ಯೋಜನೆ” ಆಕ್ಷೇಪಿಸಿ ದಾಖಲಾದ ದೂರು/ ಪ್ರಕರಣಗಳೆಷ್ಟು; ಎಲ್ಲೆಲ್ಲಿ ಯಾರ್‍ಯಾರು ಪ್ರಕರಣಗಳನ್ನು ದಾಖಲಿಸಿರುತ್ತಾರೆ; ಪ್ರಕರಣಗಳ ಕುರಿತು ನ್ಯಾಯಾಲಯ/ಟ್ರಿಬ್ಯೂನಲ್‌ಗಳ ನಿರ್ದೇಶನಗಳೇನು;

(ಇ) ‘ಎತ್ತಿನ ಹೊಳೆ ಯೋಜನೆ’ಯಿಂದ ಬಾಧಿತವಾಗುವ ಪ್ರದೇಶಗಳಾವುವು; ಉಡುಪಿ–ದಕ್ಷಿಣ ಕನ್ನಡ ಜಿಲ್ಲೆಗೆ “ಪಶ್ಚಿಮ ವಾಹಿನಿ” ಮತ್ತು ಸೌಭಾಗ್ಯ ಸಂಜೀವಿನಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಸರಕಾರದ ನಿಲುವೇನು;

(ಈ) ಎತ್ತಿನ ಹೊಳೆ ಯೋಜನೆಗೆ ಅಗತ್ಯವಿರುವ ಭೂಮಿಯ “ಭೂ ಸ್ವಾಧೀನ” ಪ್ರಕ್ರಿಯೆ ಮುಕ್ತಾಯವಾಗಿದೆಯೇ; ಭೂ ಸ್ವಾಧೀನಕ್ಕೆ ಮುಂಚೆಯೇ ಯೋಜನೆ ಅನುಷ್ಠಾನಿಸಲು ಕಾರಣಗಳೇನು;

(ಉ) “ಎತ್ತಿನ ಹೊಳೆ ಯೋಜನೆ”ಗೆ ಸಂಬಂಧಿಸಿದಂತೆ ಅರಣ್ಯ ಮತ್ತು ಪರಿಸರ ಮಂತ್ರಾಲಯಗಳು ಯಾವಾಗ ಅನುಮತಿ ನೀಡಿವೆ; ಒಟ್ಟು ಎಷ್ಟು ಮರಗಳನ್ನು ಕಡಿಯಲು ಅನುಮತಿ ದೊರಕಿದೆ;

(ಊ) “ಎತ್ತಿನ ಹೊಳೆ ಯೋಜನೆ” ವಿರೋಧಿಸಿ ಕರಾವಳಿ ಭಾಗದ ಜನರು ಪ್ರತಿಭಟನೆ ನಡೆಸುತ್ತಿದ್ದು, ಈ ಭಾಗದ ಜನರ ಹಿತ ಕಾಪಾಡಲು ಸರಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಕಂದಾಯ ಇಲಾಖೆಯ ಖಾಲಿ ಹುದ್ದೆ ಮತ್ತು ತಾಲ್ಲೂಕು ಕಛೇರಿಗಳ ಸುಧಾರಣೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೧೭ (೪೬೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಒಟ್ಟಾರೆ ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾವಾರು, ಹುದ್ದೆವಾರು, ವಿವರ ನೀಡುವುದು)

(ಆ) ಸಹಾಯಕ ಕಮೀಷನರ್, ಗ್ರೇಡ್–I, ಗ್ರೇಡ್–II, ತಹಶೀಲ್ದಾರ ಹುದ್ದೆಗಳು ಖಾಲಿ ಇದ್ದರೂ ಕಂದಾಯ ಇಲಾಖೆಯಿಂದ ನೇರ ನೇಮಕಾತಿ ಪ್ರಸ್ತಾವನೆ ನೆನೆಗುದಿಗೆ ಬೀಳಲು ಕಾರಣಗಳೇನು;

(ಇ) ನಾಡ ಕಛೇರಿ, ತಾಲ್ಲೂಕು ಕಛೇರಿಗಳಲ್ಲಿ ಆಡಳಿತ ಸುಧಾರಣೆಗೆ ಸರ್ಕಾರದ ಮುಂದಿರುವ ಯೋಜನೆಗಳೇನು;

(ಈ) ಖಾಲಿ ಹುದ್ದೆಗಳನ್ನು ಕಾಲಮಿತಿಯಲ್ಲಿ ತುಂಬಲು ಹಾಗೂ ಇಲಾಖೆಯ ನಾಡ ಕಛೇರಿ ಮತ್ತು ತಾಲ್ಲೂಕು ಕಛೇರಿಯಲ್ಲಿನ ಭ್ರಷ್ಟಾಚಾರ ತಡೆದು ಸುಧಾರಣೆ ತರಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೧೮ (೪೬೧೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾಯ್ದೆ ೧೯೯೬ ರಂತೆ, ಕಾಯ್ದೆ ಜಾರಿಗೆ ಬಂದ ನಂತರ ಇದುವರೆಗೂ ವಸೂಲಾದ ಒಟ್ಟು ಸೆಸ್ ಮೊತ್ತ ಎಷ್ಟು; ಕಲ್ಯಾಣ ಕಾರ್ಯಕ್ರಮಗಳಿಗೆ ಮಾಡಿದ ವೆಚ್ಚ ಎಷ್ಟು;

ಆ) ರಾಜ್ಯದಲ್ಲಿರುವ ನೋಂದಾಯಿತ ಕಾರ್ಮಿಕರ ಸಂಖ್ಯೆ ಎಷ್ಟು; ಲಕ್ಷಾಂತರ ಕಾರ್ಮಿಕರು ನೋಂದಣಿ ಮಾಡಿಕೊಳ್ಳದೆ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಶೇ ೧ ಸೆಸ್ ವಿಧಿಸಿ ವಸೂಲಿ ಮಾಡಲು ಹಾಗೂ ಕಟ್ಟಡ ಕಾರ್ಮಿಕರ ಕಡ್ಡಾಯ ನೋಂದಣಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಈ) ವಸೂಲಾದ ಕಾರ್ಮಿಕ ನಿಧಿ ಸೆಸ್ ಮೊತ್ತವನ್ನು ಠೇವಣಿ ಇರಿಸಲಾಗಿದೆಯೇ; ಪ್ರತಿ ವರ್ಷ ಕಾರ್ಮಿಕ ನಿಧಿ ಸೆಸ್ ಮೊತ್ತಕ್ಕೆ ಸಿಗುತ್ತಿರುವ ಬಡ್ಡಿಯ ಮೊತ್ತ ಎಷ್ಟು;

ಉ) ಗ್ರಾಮೀಣ ಮಟ್ಟದಲ್ಲಿ ಕಾರ್ಮಿಕರ ನೋಂದಣಿಯನ್ನು ಆಂದೋಲನ ರೀತಿಯಲ್ಲಿ ಹಮ್ಮಿಕೊಳ್ಳಲು ಹಾಗೂ ಕಾರ್ಮಿಕ ಕಲ್ಯಾಣ ನಿಧಿಯನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮೆಯನ್ನು ಸಮರ್ಪಕವಾಗಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ವಿವರ ನೀಡುವುದು)

## ಎತ್ತಿನ ಹೊಳೆ ಯೋಜನೆಗೆ ಖರ್ಚಾಗಿರುವ ಹಣ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೧೯ (೪೪೬೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನ ಹೊಳೆ ಯೋಜನೆಗೆ ಇಲ್ಲಿಯ ತನಕ ಖರ್ಚು ಮಾಡಲಾಗಿರುವ ಹಣ ಎಷ್ಟು; (ವಿವರ ನೀಡುವುದು)

(ಆ) ಇಲ್ಲಿಯ ತನಕ ಖರ್ಚು ಮಾಡಿರುವ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ; ಈ ಕಾಮಗಾರಿಗಳಿಗೆ ಖರ್ಚು ಮಾಡಿರುವ ಹಣವೆಷ್ಟು; ಪ್ರತಿಯೊಂದು ಕಾಮಗಾರಿಯ ವಿವರವಾದ ಮಾಹಿತಿಯನ್ನು ನೀಡುವುದು;

(ಇ) ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ಯೋಜನಾವಾರು, ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು)

(ಈ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನವೆಷ್ಟು; (ವಿವರವಾದ ಮಾಹಿತಿ ನೀಡುವುದು)

(ಉ) ಹಾಲಿ ಆರ್ಥಿಕ ವರ್ಷದಲ್ಲಿ ಈ ಯೋಜನೆಗೆ ಮಂಜೂರಾಗಿರುವ ಅನುದಾನವೆಷ್ಟು? (ತಿಳಿಸುವುದು)

## ಅರಣ್ಯದಂಚಿನಲ್ಲಿ ವಾಸ ಮಾಡುತ್ತಿರುವ ರೈತರ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦.೨೦ (೪೪೬೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯದಂಚಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಮತ್ತು ವ್ಯವಸಾಯ ಮಾಡುತ್ತಿರುವ ರೈತರಿಗೆ ಸರ್ಕಾರ ಕಳೆದ ಎರಡು ವರ್ಷದಲ್ಲಿ ನೀಡಿರುವ ವಿವಿಧ ಸೌಲಭ್ಯಗಳೇನು; (ವಿವರ ನೀಡುವುದು)

(ಆ) ಇಂತಹವರನ್ನು ಗುರುತಿಸಿ, ರಾಜ್ಯದಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಸೌಲಭ್ಯಗಳನ್ನು ನೀಡಲು ಸರ್ಕಾರ ಕಳೆದ ೨ ವರ್ಷದಲ್ಲಿ ಖರ್ಚು ಮಾಡಿರುವ ಹಣವೆಷ್ಟು; ಹಾಗೂ ಇದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಒದಗಿಸಿದ ಅನುದಾನವೆಷ್ಟು; (ವಿವರ ನೀಡುವುದು)

(ಈ) ೨೦೧೭–೧೮ನೇ ಸಾಲಿನಲ್ಲಿ ಈ ಯೋಜನೆಗೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು; ಒದಗಿಸಿದ ಅನುದಾನದಲ್ಲಿ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು; (ವಿವರ ನೀಡುವುದು)

(ಉ) ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ನ್ಯಾಯಾಲಯಗಳ ಹೊಸ ಕಟ್ಟಡಗಳಿಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೧ (೪೪೬೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನ್ಯಾಯಾಲಯಗಳ ಹೊಸ ಕಟ್ಟಡಗಳಿಗೆ/ದುರಸ್ಥಿಗೆ/ ಮೂಲ ಸೌಕರ್ಯವನ್ನು ಒದಗಿಸಲು ೨೦೧೬–೧೭ ಮತ್ತು ೧೭–೧೮ರಲ್ಲಿ ರಾಜ್ಯ ಸರ್ಕಾರ ನೀಡಿರುವ ಅನುದಾನವೆಷ್ಟು; (ಪ್ರತಿಯೊಂದಕ್ಕೂ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಒದಗಿಸಿರುವ ಅನುದಾನದಲ್ಲಿ ೨೦೧೭–೧೮ನೇ ಸಾಲಿನಲ್ಲಿ ಇಲ್ಲಿಯ ತನಕ ಖರ್ಚು ಮಾಡಿರುವ ಹಣವೆಷ್ಟು; (ವಿವರ ನೀಡುವುದು)

(ಇ) ತುಮಕೂರು ಜಿಲ್ಲೆಯಲ್ಲಿರುವ ನ್ಯಾಯಾಲಯಗಳ ಹೊಸ ಕಟ್ಟಡಗಳಿಗೆ/ ದುರಸ್ಥಿಗೆ/ಮೂಲ ಸೌಕರ್ಯವನ್ನು ಒದಗಿಸಲು ೨೦೧೬–೧೭ ಮತ್ತು ೧೭–೧೮ರಲ್ಲಿ ರಾಜ್ಯ ಸರ್ಕಾರ ನಿಗದಿಪಡಿಸಿದ ಅನುದಾನವೆಷ್ಟು; ಒದಗಿಸಿದ ಅನುದಾನದಲ್ಲಿ ಯಾವ ಯಾವ ನ್ಯಾಯಾಲಯಗಳ ಕಟ್ಟಡಗಳನ್ನು ನಿರ್ಮಿಸಿದೆ/ದುರಸ್ಥಿಗೊಳಿಸಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಹಾಗೆಯೇ, ತುಮಕೂರು ಜಿಲ್ಲೆಯಲ್ಲಿರುವ ವಕೀಲರ ಸಂಘದ ಕಟ್ಟಡಗಳಿಗೆ ಮತ್ತು ಮೂಲಭೂತ ಸೌಕರ್ಯಗಳಿಗೆ ಕಳೆದ ಎರಡು ವರ್ಷದಲ್ಲಿ ಎಷ್ಟು ಅನುದಾನವನ್ನು ನೀಡಲಾಗಿದೆ; ನೀಡಿದ ಅನುದಾನದಲ್ಲಿ ಖರ್ಚು ಮಾಡಿ ಕೈಗೊಂಡಿರುವ ಕಾಮಗಾರಿಗಳು ಮತ್ತು ಮೂಲಭೂತ ಸೌಕರ್ಯಗಳ ವಿವರಗಳನ್ನು ತಾಲ್ಲೂಕುವಾರು ನೀಡುವುದು;

(ಉ) ತುಮಕೂರು ಜಿಲ್ಲೆಯಲ್ಲಿ ಜಿಲ್ಲಾ ವಕೀಲರ ಸಂಘ ಮತ್ತು ತಾಲ್ಲೂಕು ವಕೀಲರ ಸಂಘದ ಕಟ್ಟಡಗಳಲ್ಲಿ ಮಹಿಳೆ ವಕೀಲರಿಗಾಗಿ ಪ್ರತ್ಯೇಕವಾಗಿ ಕೊಠಡಿಗಳನ್ನು ನಿರ್ಮಿಸಿ ಅವರಿಗೆ ಅಲ್ಲಿ ಒದಗಿಸಿಕೊಟ್ಟಿರುವ ಮೂಲ ಸೌಕರ್ಯದ ವಿವರಗಳನ್ನು ನೀಡುವುದು?

## ವಸತಿ ನಿರ್ಮಾಣ ಯೋಜನೆ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೨ (೪೪೬೬) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಕಳೆದ ೨ ವರ್ಷದಿಂದ ವಸತಿ ಇಲಾಖೆಯಿಂದ ವಿವಿಧ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇದಕ್ಕಾಗಿ ಇಲ್ಲಿಯ ತನಕ ಖರ್ಚು ಮಾಡಿರುವ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಣವನ್ನು ನೇರವಾಗಿ ಅವರ ಖಾತೆಗೆ ವರ್ಗಾವಣೆ ಮಾಡಲಾಗಿದೆಯೇ;

(ಈ) ತುಮಕೂರು ಜಿಲ್ಲೆಯಲ್ಲಿ ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ನೀಡಬೇಕಾಗಿರುವ ಅನುದಾನವೆಷ್ಟು; ಈ ಅನುದಾನವನ್ನು ಯಾವಾಗ ನೀಡಲಾಗುವುದು;

(ಉ) ೨೦೧೭–೧೮ನೇ ಸಾಲಿನ ಅಂತ್ಯಕ್ಕೆ ತುಮಕೂರು ಜಿಲ್ಲೆಯಲ್ಲಿ ವಿವಿಧ ಯೋಜನೆಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಗುರಿ ಹೊಂದಲಾಗಿದೆ; ಇದಕ್ಕಾಗಿ ಮೀಸಲಿರಿಸಿರುವ ಅನುದಾನವೆಷ್ಟು? (ವಿವರ ನೀಡುವುದು)

## ಕರ್ನಾಟಕ ಆಡಳಿತಾತ್ಮಕ ಮೇಲ್ಮನವಿ ಪ್ರಾಧಿಕಾರದ ವಿಭಾಗೀಯ ಪೀಠದ ಸ್ಥಾಪನೆ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೩ (೪೫೪೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಕರ್ನಾಟಕ ಆಡಳಿತಾತ್ಮಕ ಮೇಲ್ಮನವಿ ಪ್ರಾಧಿಕಾರದ ವಿಭಾಗೀಯ ಪೀಠವನ್ನು ಸ್ಥಾಪಿಸುತ್ತೇವೆಂಬ ಸರ್ಕಾರದ ಘೋಷಣೆ ಇನ್ನೂ ಅನಷ್ಠಾನಗೊಳ್ಳದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಪೀಠದ ಘೋಷಣೆ ಯಾವಾಗ ಮಾಡಲಾಯಿತು; ಇದರ ಅನುಷ್ಠಾನದ ಪ್ರಕ್ರಿಯೆ ಯಾವ ಹಂತದಲ್ಲಿದೆ;

(ಇ) ವಿಭಾಗೀಯ ಪೀಠ ಸ್ಥಾಪಿಸಲು ಸ್ಥಳ ಗುರುತಿಸಲಾಗಿದೆಯೇ; ಎಲ್ಲಿ ಗುರುತಿಸಲಾಗಿದೆ; ಸ್ಥಳದ ವಿವರ ನೀಡುವುದು;

(ಈ) ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ವಿಭಾಗೀಯ ಪೀಠಕ್ಕೆ ನ್ಯಾಯಾಧೀಶರನ್ನೊಳಗೊಂಡಂತೆ ಅವಶ್ಯಕ ಹುದ್ದೆಗಳ ಮಂಜೂರಾತಿಯನ್ನು ಪಡೆಯಲಾಗಿದೆಯೇ; ಸಿಬ್ಬಂದಿಗಳ ನಿಯೋಜನೆ ಮಾಡಲಾಗಿದೆಯೇ;

(ಉ) ಯಾವ ಕಾಲಮಿತಿಯಲ್ಲಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ವಿಭಾಗೀಯ ಪೀಠ ಅನುಷ್ಠಾನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು; ಇದು ಯಾವ ಕಾಲಮಿತಿಯಲ್ಲಿ ಕಾರ್ಯಾರಂಭ ಮಾಡಲಾರಂಭಿಸುವುದು? (ವಿವರ ನೀಡುವುದು)

## ಅಸಂಘಟಿತ ಕಾರ್ಮಿಕರ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೪ (೪೫೬೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಜೀವ ಭದ್ರತೆ ಹಾಗೂ ಆರ್ಥಿಕ ಭದ್ರತೆಯಿಲ್ಲದೆ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಅಸಂಘಟಿತ ಕಾರ್ಮಿಕರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಹಾಗೂ ಅವರಿಗೆ ಕೆಲಸದಲ್ಲಿ ಜೀವ ರಕ್ಷಣೆ, ಜೀವ ವಿಮೆ (ಜೀವ ಭದ್ರತೆ) ಮತ್ತು ಆರ್ಥಿಕ ರಕ್ಷಣೆ (ಜೀವನ ಭದ್ರತೆ) ನೀಡುವ ದೃಷ್ಟಿಯಿಂದ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

(ಇ) ರಾಜ್ಯದಲ್ಲಿ ಯಾವ ಯಾವ ವೃತ್ತಿಗಳನ್ನು ಈ ಅಸಂಘಟಿತ ವಲಯದಲ್ಲಿ ಸೇರಿಸಲಾಗಿದೆ'; ಯಾವ ಮಾನದಂಡದ ಮೇಲೆ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರನ್ನು ವಿಂಗಡಿಸಲಾಗುವುದು; (ವಿವರ ನೀಡುವುದು)

(ಈ) ಸದರಿ ಅಸಂಘಟಿತ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಸರ್ಕಾರವು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ಎಷ್ಟೆಷ್ಟು ಅನುದಾನ ವೆಚ್ಚ ಮಾಡಿದೆ? (ಸಂಪೂರ್ಣ ವಿವರ ನೀಡುವುದು)

## ಕೆರೆ ಸಂಜೀವಿನಿ ಯೋಜನೆ ಅನುಷ್ಠಾನದ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೫ (೪೫೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೭–೧೮ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಕೆರೆಗಳ ಪುನರುಜ್ಜೀವನಗೊಳಿಸಲು ಘೋಷಿಸಲಾಗಿರುವ 'ಕೆರೆ ಸಂಜೀವಿನಿ' ಯೋಜನೆಯು ಘೋಷಣೆಯಾಗಿಯೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, 'ಕೆರೆ ಸಂಜೀವಿನಿ' ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

(ಇ) ರಾಜ್ಯದ ಕೆರೆಗಳ ಪುನರುಜ್ಜೀವನಗೊಳಿಸುವ ''ಕೆರೆ ಸಂಜೀವಿನಿ'' ಯೋಜನೆಯಡಿ ಎಷ್ಟು ಕೆರೆಗಳನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) "ಕೆರೆ ಸಂಜೀವಿನಿ" ಯೋಜನೆಗೆ ೨೦೧೭–೧೮ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಷ್ಟು ಅನುದಾನವನ್ನು ಕಾಯ್ದಿರಿಸಲಾಗಿದೆ; ಈಗಾಗಲೇ ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ; ಬಾಕಿ ಉಳಿದಿರುವ ಅನುದಾನವೆಷ್ಟು; ಯಾವ ಕಾಲಮಿತಿಯಲ್ಲಿ ಸಂಪೂರ್ಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು;

(ಉ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳನ್ನು ಪುನರುಜ್ಜೀವನಗೊಳಿಸಲಾಗಿದೆ; ಇದಕ್ಕಾಗಿ ಎಷ್ಟು ಅನುದಾನವನ್ನು ವೆಚ್ಚ ಮಾಡಲಾಗಿದೆ? (ವರ್ಷಾವಾರು,ತಾಲ್ಲೂಕುವಾರು ವಿವರ ನೀಡುವುದು)

## ರೈತರ ಜಮೀನಿಗೆ ನೀರಾವರಿ ಸೌಲಭ್ಯದ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೨೯ (೪೫೭೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಘಟಪ್ರಭಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಲ್ಲಿ ಮತ್ತು ಚಿಕ್ಕೋಡಿ ಉಪ–ಕಾಲವೆಗಳಲ್ಲಿ ಹೂಳು ತುಂಬಿಕೊಂಡು, ಸಮರ್ಪಕ ನಿರ್ವಹಣೆಯಿಲ್ಲದೆ ಕಾಲುವೆಗಳ ಕೊನೆಯ ಭಾಗದ ರೈತರಿಗೆ ನೀರು ತಲುಪದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಹಾಗಿದ್ದಲ್ಲಿ, ಕೊನೆಯ ಭಾಗದ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಸದರಿ ಘಟಪ್ರಭಾ ಎಡದಂಡೆ ಜಿಎಲ್‌ಬಿಸಿ ಹಾಗೂ ಸಿ.ಬಿ.ಸಿ (ಚಿಕ್ಕೋಡಿ ಬ್ರಾಂಚ್ ಕೆನಾಲ್ಸ್) ಕಾಲುವೆಗಳ ಕಟ್ಟ ಕಡೆಯ ನಾಲೆಗಳಲ್ಲಿ ಎಷ್ಟು ಹೆಕ್ಟೇರ್ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ; ಇದಕ್ಕೆ ಕಾರಣಗಳೇನು;

(ಈ) ಸದರಿ ಪ್ರದೇಶದ ಪಕ್ಕದಲ್ಲೇ ಹರಿಯುತ್ತಿರುವ ಕೃಷ್ಣಾ ನದಿಯಿಂದ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಚಿಂತಿಸುತ್ತಿದೆಯೇ; ಯಾವ ಕಾಲಮಿತಿಯಲ್ಲಿ ಇದು ಕಾರ್ಯಗತಗೊಳ್ಳುವುದು? (ವಿವರ ನೀಡುವುದು)

## ರಾಜ್ಯದ ಒಟ್ಟಾರೆ ಅರಣ್ಯ ಪ್ರದೇಶದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೨೭ (೪೪೭೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಒಟ್ಟಾರೆ ಭೂಪ್ರದೇಶದ ವಿಸ್ತೀರ್ಣವೆಷ್ಟು;

(ಆ) ಆ ಭೂ ಪ್ರದೇಶದಲ್ಲಿರುವ ಅರಣ್ಯ ಪ್ರದೇಶ ವಿಸ್ತೀರ್ಣವೆಷ್ಟು;

(ಇ) ಆ ಪೈಕಿ ಕಬಳಿಕೆಯಾಗಿರುವ ಮತ್ತು ನಾಶವಾಗಿರುವ ಅರಣ್ಯ ಪ್ರದೇಶವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಈ) ಅರಣ್ಯ ನಾಶ ತಡೆಯಲು, ಅರಣ್ಯ ರಕ್ಷಣೆ ಮಾಡಲು ಮತ್ತು ಕಾಡು ಮರಗಳನ್ನು ಬೆಳೆಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ? (ತಾಲ್ಲೂಕುವಾರು ವಿವರ ನೀಡುವುದು)

**ರಾಜ್ಯದಲ್ಲಿನ ಅರಣ್ಯದಂಚಿನ ನಿವಾಸಿಗಳ ಬಗ್ಗೆ**

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೨೮ (೪೪೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯದಂಚಿನ ನಿವಾಸಿಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯದಂಚಿನ ನಿವಾಸಿಗಳಿಂದ ಅನಿಲ ಸಂಪರ್ಕ ಪಡೆಯಲು ಬಂದ ಅರ್ಜಿಗಳ ಸಂಖ್ಯೆ ಎಷ್ಟು;

(ಇ) ಬಂದಿದ್ದಲ್ಲಿ, ಅರ್ಜಿಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಅನಿಲ ಸಂಪರ್ಕವನ್ನು ವಿತರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಅರಣ್ಯದಂಚಿನ ನಿವಾಸಿಗಳಿಗೆ ಅನಿಲ ಸಂಪರ್ಕದ ವಿತರಣೆ ಮಾಡಲು ಕೇಂದ್ರ ಸರ್ಕಾರದ ಅನುದಾನವೆಷ್ಟು ಮತ್ತು ರಾಜ್ಯ ಸರ್ಕಾರ ಭರಿಸುವ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಉ) ೨೦೧೬–೧೭ನೇ ಸಾಲಿನ ಅರಣ್ಯದಂಚಿನ ನಿವಾಸಿಗಳಿಗೆ ಅನಿಲ ಸಂಪರ್ಕ ಮಾಡಲು ಚಿಕ್ಕಮಗಳೂರು ಜಿಲ್ಲೆಯು ನಿಗಧಿ ಮಾಡಿರುವ ಪ್ರಮಾಣವೆಷ್ಟು? (ವಿವರ ನೀಡುವುದು)

## ಚಿಕ್ಕಮಗಳೂರು ಜಿಲ್ಲೆ ಬಗರ್‌ಹುಕುಂ ಅರ್ಜಿದಾರರ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೨೯ (೪೫೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಬಗರ್‌ಹುಕುಂ ಅರ್ಜಿದಾರರಿದ್ದಾರೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ಬಗ್ಗೆ ಸರ್ಕಾರ ಸಕ್ರಮ ಮಾಡುವ, ಗುತ್ತಿಗೆಗೆ ಕೊಡುವ ಬಗ್ಗೆ ಯೋಚನೆ ಮಾಡಿದೆಯೇ;

ಇ) ಈ ಮೇಲಿನ ಕ್ರಮ ಕೈಗೊಳ್ಳದಿದ್ದಲ್ಲಿ, ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ?

## ಧರ್ಮ ತೋಪುವನ್ನು ಸ್ಮಶಾನಗಳಾನ್ನಾಗಿ ಮಾರ್ಪಡಿಸಿರುವ ಬಗ್ಗೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೩೦ (೪೬೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಉತ್ತರ ಅಪರ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮದ ಸರ್ವೆ ನಂ.೧೫ ರಲ್ಲಿ ೧.೧೫ ಗುಂಟೆಯ ಧರ್ಮ ತೋಪುವಿನಲ್ಲಿ ಗ್ರಾಮದ ಹಿರಿಯರ ಅಂತ್ಯಕ್ರಿಯೆ ನಡೆಸಿಕೊಂಡು ಬರುತ್ತಿದ್ದು, ಇಲ್ಲಿ ಸಮಾಧಿಗಳನ್ನು ಅಗೆದು ಹಾಳು ಮಾಡಿದ್ದರೂ ಅದರ ವಿರುದ್ಧ ಗ್ರಾಮಸ್ಥರು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ರವರಿಗೆ ದೂರು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಜನರ ನಂಬಿಕೆ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು;

(ಇ) ಈಗಿರುವ ಸ್ಮಶಾನವಾಗಿ ಬಳಸುತ್ತಿರುವ ಧರ್ಮ ತೋಪನ್ನು ಸ್ಮಶಾನವಾಗಿ ಸರ್ಕಾರದ ದಾಖಲೆಗಳಲ್ಲಿ ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರವು ಸೂಕ್ತ ಕ್ರಮಕೈಗೊಳ್ಳುವುದೇ?

## ಸರ್ಕಾರದ ಜಾಗ ಒತ್ತುವರಿ ತೆರವಿನ ಬಗ್ಗೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೩೧ (೪೬೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಉತ್ತರ ಅಪರ ತಾಲ್ಲೂಕು, ಯಲಹಂಕ ಹೋಬಳಿ ಅವಲಹಳ್ಳಿ ಗ್ರಾಮದ ಸರ್ವೆ ನಂ.೧೧ರಲ್ಲಿ ೦.೩೪ಗುಂಟೆ ಜಮೀನನ್ನು ಸರ್ಕಾರದ ಆಸ್ತಿ ಎಂದು ಬೋರ್ಡ್ ಹಾಕಿದ್ದರೂ ಸಹ ಕಿತ್ತುಹಾಕಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಸಂಬಂಧ ಗ್ರಾಮಸ್ಥರು ದೂರು ನೀಡಿದ್ದರು, ಒತ್ತುವರಿದಾರರು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆ ಕೋರಿದ್ದಾರೆ. ಇದುವರೆಗೂ ತಡೆ ತೆರೆವಿಗೆ ಕ್ರಮ ವಹಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರ ನೀಡುವುದು;

(ಆ) ಉಚ್ಛ ನ್ಯಾಯಾಲಯದ ತಡೆ ತೆರವಿಗೆ ವಿಳಂಬವಾಗಲು ಕಾರಣವೇನು;

(ಇ) ಸರ್ಕಾರದ ಆಸ್ತಿ ನಷ್ಟಕ್ಕೆ ಕಾರಣವಾದವರ ವಿರುದ್ಧ ಇದುವರೆಗೂ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಕೆರೆ ಅಕ್ರಮ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೩೨ (೪೬೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಉತ್ತರ ಅಪರ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮದ ಸರ್ವೆ ನಂ.೧೦ ರಲ್ಲಿ ೧೧.೦೦ ಎಕರೆ ವಿಸ್ತೀರ್ಣದ ಕೆರೆ ಅಕ್ರಮ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಸಂಪೂರ್ಣ ವಿಸ್ತೀರ್ಣದಲ್ಲಿ ನೀರು ನಿಲ್ಲುವಂತೆ, ಕೆರೆಗೆ ಹಾನಿಯಾಗದಂತೆ, ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ತಹಸಿಲ್ದಾರ್‌ರವರಿಗೆ ಸೂಚಿಸಿದ್ದರೂ, ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು;

(ಆ) ಈ ವಿಷಯಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್‌ರವರು ವರದಿಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕೆರೆಯ ಒಟ್ಟು ವಿಸ್ತೀರ್ಣವನ್ನು ಗುರುತಿಸಿದೆಯೇ; ಬಫರ್ ಜೋನ್ ಗುರುತಿಸಿದೆಯೇ; ಒತ್ತುವರಿ ತೆರವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೩೩ (೪೪೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಜಮೀನುಗಳು ಒತ್ತುವರಿ ಆಗಿರುವುದು ನಿಜವೇ;

(ಆ) ಹಾಗಿದ್ದರೆ, ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳ ಸರ್ವೆ ಕಾರ್ಯವನ್ನು ಸರ್ಕಾರದಿಂದ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದರೆ, ಒತ್ತುವರಿಯಾಗಿರುವ ಒಟ್ಟು ವಿಸ್ತೀರ್ಣ ಎಷ್ಟು; ಇದುವರೆವಿಗೆ ಸರ್ಕಾರ ಎಷ್ಟು ವಿಸ್ತೀರ್ಣದ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಬಾಕಿಯಿರುವ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ಬೆಂಗಳೂರು ವ್ಯಾಪ್ತಿಯಲ್ಲಿನ ರಾಜಕಾಲುವೆ, ಕೆರೆಗಳು ಮತ್ತು ಬಫರ್ ಜೋನ್ ಪ್ರದೇಶಗಳನ್ನು ಖಾಸಗಿಂಯವರು ಒತ್ತುವರಿ ಮಾಡಿಕೊಂಡಿರುವವರ ವ್ಯಕ್ತಿಗಳ/ಸಂಸ್ಥೆಗಳ ವಿವರ ಮತ್ತು ಒತ್ತುವರಿ ವಿಸ್ತೀರ್ಣದ ವಿವರಗಳನ್ನು ಒದಗಿಸುವುದು; ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರ ನೀಡುವುದು?

## ಕಾರ್ಮಿಕರಿಗೆ ಕಲ್ಪಿಸಿರುವ ಸೌಲಭ್ಯಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೩೪ (೪೪೩೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳು ಕಲ್ಪಿಸಿರುವುದು ನಿಜವೇ; ಆ ಸೌಲಭ್ಯಗಳ ವಿವರಗಳೇನು;

(ಆ) ಕಾರ್ಮಿಕರು ಈ ಸೌಲಭ್ಯ ಪಡೆಯಲು ಅನುಸರಿಸಬೇಕಾದ ವಿಧಾನಗಳೇನು; (ವಿವರ ನೀಡುವುದು)

(ಇ) ಕಾರ್ಮಿಕ ನಿಧಿಗೆ ವಿವಿಧ ರೀತಿಯಲ್ಲಿ ಇದುವರೆವಿಗೆ ಸಂಗ್ರಹವಾಗಿರುವ ಹಣದ ಮೊತ್ತ ಎಷ್ಟು; ಖರ್ಚಾದ ಹಣದ ಮೊತ್ತ ಎಷ್ಟು; ಬಾಕಿ ಉಳಿಕೆ ಮೊತ್ತ ಎಷ್ಟು; ಯಾವ ಯಾವ ಕಾರ್ಯಕ್ರಮಗಳಿಗೆ ಹಣವನ್ನು ಖರ್ಚು ಮಾಡಲಾಗಿದೆ; ೨೦೧೩–೧೪ ರಿಂದ ೨೦೧೭–೧೮ ರವರೆಗೆ ವರ್ಷಾವಾರು, ಸೌಲಭ್ಯಗಳ ಸಹಿತ ಫಲಾನುಭವಿಗಳ ಸಂಖ್ಯೆ ಮತ್ತು ಹಣದ ವಿವರ ನೀಡುವುದು?

## ಆಶ್ರಯ ಮನೆಗಳ ಸಾಲ ಮನ್ನಾದ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೩೭ (೪೪೩೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಆಶ್ರಯ ಮನೆಗಳ ಸಾಲವನ್ನು ಮನ್ನಾ ಮಾಡಿರುವುದು ನಿಜವೇ;

(ಆ) ಹಾಗಿದ್ದರೆ, ಯಾವ ವರ್ಷದವರೆಗಿನ ಆಶ್ರಯ ಮನೆಗಳ ಸಾಲವನ್ನು ಮನ್ನಾ ಮಾಡಿದೆ; (ವಿವರ ನೀಡುವುದು)

(ಇ) ಸಾಲ ಮನ್ನಾ ಮಾಡಿದ ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಈ) ಸಾಲ ಮನ್ನಾದ ಒಟ್ಟು ಹಣ ಎಷ್ಟು; ಬಡ್ಡಿ ಎಷ್ಟು; (ವಿವರ ನೀಡುವುದು)

(ಉ) ಸಾಲ ಮನ್ನಾ ತಿಳುವಳಿಕೆ ಪತ್ರವನ್ನು ಫಲಾನುಭವಿಗಳಿಗೆ ನೀಡಲಾಗಿದೆಯೇ? (ವಿವರ ನೀಡುವುದು)

## ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ ಹಾಗೂ ಶ್ರೀಗಂಧ ನೆಡುತೋಪುಗಳ ಅಭಿವೃದ್ಧಿ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೩೮ (೪೪೩೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ "ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ" ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 'ಶ್ರೀಗಂಧ ನೆಡುತೋಪು'ಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ಇದುವರೆವಿಗೆ ಎಷ್ಟು' ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ'ಗಳ ಅಭಿವೃದ್ಧಿ ಪಡಿಸಲಾಗಿದೆ; ಈ ಯೋಜನೆಗೆ ಸರ್ಕಾರ ಮೀಸಲಿಟ್ಟ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು; ಬಾಕಿ ಎಷ್ಟು; (ವಿವರ ನೀಡುವುದು)

(ಇ) ಹಾಗಿದ್ದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಶ್ರೀಗಂಧದ ನಡುತೋಪುಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಈ ಯೋಜನೆಗೆ ಸರ್ಕಾರ ಮೀಸಲಿಟ್ಟ ಹಣ ಎಷ್ಟು; ಖರ್ಚು ಮಾಡಿದ ಹಣ ಎಷ್ಟು; ಬಾಕಿ ಎಷ್ಟು? (ವಿವರ ನೀಡುವುದು)

## ವಾರಾಹಿ ನೀರಾವರಿ ಯೋಜನೆಯ ಕಾಮಗಾರಿಯ ಗುಣಮಟ್ಟದ ತನಿಖಾ ವರದಿ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೩೭ (೪೪೮೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನೀರಾವರಿ ನಿಗಮದ ವಾರಾಹಿ ನೀರಾವರಿ ಯೋಜನೆಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿಗಳ ಕುರಿತು. ತನಿಖೆಯನ್ನು ನಡೆಸಲು M/s Civil Aid Techno clinic ಸಂಸ್ಥೆಯವರಿಗೆ ಯಾವಾಗ ಆದೇಶವನ್ನು ನೀಡಲಾಯಿತು; ಈ ತನಿಖಾವರದಿಯನ್ನು ನೀಡಲು ನಿಗಮದಿಂದ ಸಂಸ್ಥೆಗೆ ನೀಡಲಾದ ಕಾಲಮಿತಿ ಯಾವುದು; ನಿಗದಿ ಪಡಿಸಲಾದ ಮೊತ್ತವೆಷ್ಟು; ವಾಸ್ತವವಾಗಿ ಸಂಸ್ಥೆಗೆ ಪಾವತಿಸಲಾದ ಮೊತ್ತವೆಷ್ಟು; ವರದಿ ನೀಡಲು ಸಂಸ್ಥೆಯು ಪಡೆದ ಕಾಲವಕಾಶವೆಷ್ಟು; ವರದಿ ನೀಡಿದ ದಿನಾಂಕ ಯಾವುದು; (ಆದೇಶದ ಪ್ರತಿ ಒದಗಿಸುವುದು)

(ಆ) M/s Civil Aid Techno clinic ಸಂಸ್ಥೆಯವರು ಕಾಮಗಾರಿಗಳು ನಿಗದಿತ ಗುಣಮಟ್ಟದಲ್ಲಿ ಇಲ್ಲದೇ ಇರುವ ಕುರಿತು

ತನಿಖಾವರದಿಯನ್ನು ನೀಡಿದ ನಂತರ ಗುತ್ತಿಗೆದಾರರ ಕೋರಿಕೆಯಂತೆ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ಮರು ತನಿಖಾ ವರದಿ ನೀಡಲು ಸಂಸ್ಥೆಗೆ ಆದೇಶ ನೀಡಿದ್ದರ ಉದ್ದೇಶವೇನು; (ಆದೇಶ ಪ್ರತಿ ಒದಗಿಸುವುದು)

(ಇ) ಗುತ್ತಿಗೆದಾರ, ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ತನಿಖಾವರದಿ ನೀಡಬೇಕಾದ ಸಂಸ್ಥೆಯವರು ಒಟ್ಟಾಗಿ ಮರು ತನಿಖಾವರದಿಯಲ್ಲಿ ಪ್ರಥಮ ವರದಿಗೆ ವ್ಯತಿರಿಕ್ತವಾಗಿ ವರದಿ ನೀಡಿ ಸರಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವುದು ಸಾಬೀತಾಗಿಲ್ಲವೇ; ಈ ರೀತಿ ಅಕ್ರಮವೆಸಗಿದ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ದ ಸರಕಾರದ ಕ್ರಮವೇನು;

(ಈ) ತನ್ನ ಪ್ರಥಮ ತನಿಖಾವರದಿಗೆ ವಿರುದ್ಧವಾಗಿ ಮರು ತನಿಖಾವರದಿ ನೀಡಿದ M/s Civil Aid Techno clinic ಸಂಸ್ಥೆಯನ್ನು ಸರಕಾರದಿಂದ ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು?

## ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರಿಗೆ ದೊರಕುವ ಸೌಲಭ್ಯಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

ಳಂಶಿಲ (ಳಳಗಲ) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯ ವಿವಿಧ ಹಂತದ ಕಚೇರಿಗಳ ಸಂಖ್ಯೆ ಎಷ್ಟು; ಅವು ಯಾವುವು; ಅವುಗಳಲ್ಲಿ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು; ತೆರವಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರದಿಂದ ತೆಗೆದುಕೊಂಡ ಕ್ರಮವೇನು;

(ಆ) ಕಾರ್ಮಿಕ ಇಲಾಖೆಯಿಂದ ನೀಡಲಾಗುವ ವಿಶೇಷ ಸವಲತ್ತುಗಳು ಯಾವುವು; ಕಳೆದ ೩ ವರ್ಷದಲ್ಲಿ ಉಡುಪಿ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಿಂದ ನೀಡಲಾದ ಸೌಲಭ್ಯಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು) ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಇಲಾಖಾ ಕ್ರಮವೇನು;

(ಇ) ಬೇರೆ ಬೇರೆ ಉದ್ದಿಮೆಗಳಲ್ಲಿ ಬೇರೆ ಬೇರೆ ಕೆಲಸವನ್ನು ಮಾಡುತ್ತಿರುವ ಕಾರ್ಮಿಕರಿಗೆ ಮತ್ತು ಅಸಂಘಟಿತ ಕಾರ್ಮಿಕರಿಗೆ ದೊರಕುವ ಸೌಲಭ್ಯಗಳು ಯಾವುವು; ರಾಜ್ಯದಿಂದ ಮತ್ತು ಕೇಂದ್ರದಿಂದ ದೊರೆಯುವ ಸೌಲಭ್ಯಗಳು, ಅರ್ಹತಾ ಮಾನದಂಡಗಳು ಯಾವುವು?

## ಆನಗಳ್ಳಿಯ ಕಿಂಡಿ ಅಣೆಕಟ್ಟನ್ನು ಪುನರ್ ನಿರ್ಮಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೩೯ (೪೪೨೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಂದಾಪುರ ತಾಲ್ಲೂಕಿನ ಆನಗಳ್ಳಿಯಲ್ಲಿ ವಾರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಆನಗಳ್ಳಿ ಕಿಂಡಿ ಅಣೆಕಟ್ಟು ಪ್ರಸ್ತುತ ನಾದುರಸ್ಥಿಯಲ್ಲಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ನೀರನ್ನು ಕೋಣಿ, ಕಂದಾವರ, ವಡೇರ ಹೋಬಳಿ, ಕುಂದಾಪುರ ಕಸಬಾದ ರೈತರು ಕೃಷಿಗೆ ಅವಲಂಬಿಸಿರುವುದು ಸರಕಾರದ ಗಮನಕ್ಕೆ ಇದೆಯೇ;

(ಆ) ಪೂರ್ಣವಾಗಿ ನಶಿಸಿ ಹೋಗಿರುವ ಈ ಆನಗಳ್ಳಿ ಕಿಂಡಿ ಅಣೆಕಟ್ಟನ್ನು ಪುನರ್ ನಿರ್ಮಿಸುವ ಯೋಜನೆ ಸರಕಾರದ ಮುಂದಿದೆಯೇ; ಹೌದಾದಲ್ಲಿ ಈ ಯೋಜನೆಯ ಅಂದಾಜು ಮೊತ್ತವೆಷ್ಟು ಮತ್ತು ಯಾವಾಗ ಪ್ರಾರಂಭಿಸಲಾಗುವುದು; ಇಲ್ಲವಾದಲ್ಲಿ ಕಾರಣವೇನು?

## ನಿವೇಶನ ವಿತರಣೆ ಮತ್ತು ನಿವೇಶನ ಖರೀದಿಯಲ್ಲಿ ಇಲಾಖೆಯ ದ್ವಂದ್ವ ನಿಲುವಿನ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೪೦ (೪೪೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರಕಾರವು ಉಚಿತವಾಗಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುತ್ತಿರುವಾಗ ನೂತನ ಭೂಸುಧಾರಣೆಯ ಅನ್ವಯ ಕೃಷಿ ಕಾರ್ಮಿಕರಿಗೆ ಉಚಿತವಾಗಿ ನಿವೇಶನವನ್ನು ಹಂಚದೇ ಇರಲು ಕಾರಣವೇನು;

(ಆ) ನಿವೇಶನಗಳಿಗಾಗಿ ಮಾರುಕಟ್ಟೆಯ ದರದಲ್ಲಿ ನಿವೇಶನವನ್ನು ಖರೀದಿಸಿ ನಿವೇಶನ ರಹಿತರಿಗೆ ಹಂಚುವ ಸರಕಾರ ನೂತನ ಭೂಸುಧಾರಣೆ ಕಾಯಿದೆ ಅನ್ವಯ ರೈತರ ಭೂ ಸ್ವಾಧೀನತೆಗೆ ಕನಿಷ್ಟ ದರ ನಿಗದಿ ಮಾಡಲು ಕಾರಣವೇನು?

## ವಸತಿ ನಿಗಮದ ಸಹಾಯಧನ ಮರುಪಾವತಿಸಿದವರಿಗೆ ಬೇಬಾಕಿ ಪ್ರಮಾಣ ಪತ್ರ ನೀಡುವಲ್ಲಿ ವಿಳಂಬ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೪೧ (೪೪೨೨) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಸತಿ ರಹಿತರು ಮನೆ ನಿರ್ಮಾಣಕ್ಕೆ ಪಡೆದ ಸಹಾಯ ಧನವನ್ನು ರಾಜೀವಗಾಂಧಿ ವಸತಿ ನಿಗಮಕ್ಕೆ ಪಾವತಿಸಿದಾಗ ನಿಗಮದಿಂದ ಬೇಬಾಕಿ (No Due) ಪ್ರಮಾಣ ಪತ್ರ ನೀಡಲು ವಿಳಂಬ ಮಾಡುತ್ತಿರಲು ಕಾರಣವೇನು; ಹಣ ಕಟ್ಟಿದ ತಕ್ಷಣ ಬೇಬಾಕಿ

(No Due) ಪ್ರಮಾಣ ಪತ್ರ ದೊರೆಯದಿದ್ದಲ್ಲಿ, ಮೂಲಭೂತ ಹಕ್ಕಿಗೆ ಧಕ್ಕೆಯಾದಂತೆ ಆಗುವುದಿಲ್ಲವೇ; ಸರಿಪಡಿಸಲು ಸರಕಾರದ ಕ್ರಮವೇನು;

(ಆ) ಮನೆ ರಿಪೇರಿಗೆ ಇಲಾಖೆಯಿಂದ ಸಹಾಯಧನ ಪಡೆದ ಫಲಾನುಭವಿಗಳು ಹೊಸ ಮನೆಯ ಫಲಾನುಭವಿಗಳಾಗಿ ಎಷ್ಟು ವರ್ಷದ ನಂತರ ಆಯ್ಕೆಯಾಗಬಹುದಾಗಿದೆ;

(ಇ) ವಸತಿ ಇಲಾಖೆಯು ಜಿಲ್ಲಾ ಮಟ್ಟದ ಕಛೇರಿಯನ್ನು ಹೊಂದಿದೆಯೇ; ಇಲ್ಲವಾದಲ್ಲಿ, ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನ, ಜನರಿಗಾಗುವ ಸಮಸ್ಯೆ, ತೊಂದರೆಯ ಪರಿಹಾರವನ್ನು ಕಂಡುಕೊಳ್ಳಲು ಕೇಂದ್ರೀಕೃತ ವ್ಯವಸ್ಥೆಯಿಂದ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

## ರೇರಾ ಕಾಯ್ದೆ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೪೨ (೪೪೫೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ "ರೇರಾ" ಕಾಯ್ದೆ ಜಾರಿ ಮಾಡಿ ಕೇಂದ್ರದ ಕಾಯ್ದೆಯ ನಿಯಮಗಳನ್ನು ರಾಜ್ಯ ಸರ್ಕಾರ ತನಗೆ ಬೇಕಾದಂತೆ ಬದಲಿಸಿಕೊಂಡಿದೆ ಎಂಬ ಮಾತುಗಳು ಕೇಳಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು;

(ಆ) ರೇರಾ ಕಾಯ್ದೆಯ ನಿಯಮಗಳನ್ನು ಇನ್ನೂ ಬಿಡುಗಡೆ ಮಾಡದೇ ಇರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ರೇರಾ ಕಾಯ್ದೆಯ ನಿಯಮಗಳನ್ನು ಬಿಡುಗಡೆ ಮಾಡಲಾಗುವುದು;

(ಇ) ರೇರಾ ಕಾಯ್ದೆಯಿಂದ ಸಾರ್ವಜನಿಕರಿಗೆ ಆಗುವ ಅನುಕೂಲಗಳ ಬಗ್ಗೆ ವಿವರ ನೀಡುವುದು ಮತ್ತು ಸರ್ಕಾರದ ಆದೇಶದ ಪ್ರತಿಯನ್ನು ಒದಗಿಸುವುದು;

(ಈ) ಕರ್ನಾಟಕದಲ್ಲಿ ಅಧಿಕೃತವಾಗಿ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಹೂಡಿಕೆಯಾಗಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಉ) ರಾಜ್ಯಾದ್ಯಂತ ಈಗಾಗಲೇ ರೇರಾಕ್ಕೆ ಬಂದ ದೂರುಗಳೆಷ್ಟು; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು)

## ಎಂಡೋ ಪೀಡಿತರ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೪೩ (೪೪೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈವರೆಗೂ ದಾಖಲಾಗಿರುವ ಎಂಡೋ ಪೀಡಿತರ ಸಂಖ್ಯೆ ಎಷ್ಟು; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಎಂಡೋ ಪೀಡಿತರಿಗೆ ಇಲ್ಲಿಯವರೆಗೂ ಯಾವ ಯಾವ ಯೋಜನೆಗಳಲ್ಲಿ ಪರಿಹಾರ ಕಲ್ಪಿಸಲಾಗಿದೆ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕೇರಳ ಮಾದರಿಯಲ್ಲಿ ರಾಜ್ಯದ ಎಂಡೋ ಪೀಡಿತರಿಗೆ ಪರಿಹಾರ ನೀಡುವ ವಿಚಾರವಾಗಿ ಸರ್ಕಾರ ಏನು ಕ್ರಮಕೈಗೊಂಡಿದೆ; (ವಿವರಣೆ ನೀಡುವುದು)

(ಈ) ಎಂಡೋ ಪೀಡಿತರ ಅನುಕೂಲಕ್ಕಾಗಿ ಕಳೆದ ನಾಲ್ಕು ವರ್ಷಗಳಿಂದ ಮೀಸಲಿಟ್ಟ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

# ಅನುದಾನಿತ ಐ.ಟಿ.ಐ. ನೌಕರರಿಗೆ ೧೯೯೭ರ ಅನುದಾನ ಸಂಹಿತೆಯನ್ನು ಪರಿಷ್ಕರಿಸದಿರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೦೪೪ (೪೪೫೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅನುದಾನಿತ ಐ.ಟಿ.ಐ. ಕಾಲೇಜುಗಳ ನೌಕರರುಗಳಿಗೆ ಥಾಮಸ್ ವರದಿಯನ್ವಯ ೧೯೯೭ರ ಅನುದಾನ ಸಂಹಿತೆಯನ್ನು ಪರಿಷ್ಕರಿಸದಿರಲು ಕಾರಣಗಳೇನು: (ವಿವರ ನೀಡುವುದು)

(ಆ) ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಇರುವ ಸೇವಾ ಸೌಲಭ್ಯಗಳೇನು; ಅವುಗಳನ್ನು ಈ ನೌಕರರಿಗೆ ನೀಡಲಾಗಿದೆಯೇ; ನೀಡಿಲ್ಲದಿದ್ದರೆ, ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಐ.ಟಿ.ಐ. ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರಲ್ಲಿ ಇದುವರೆವಿಗೆ ಎಷ್ಟು ನೌಕರರು ನಿವೃತ್ತರಾಗಿದ್ದಾರೆ; (ವಿವರ ನೀಡುವುದು) ನಿವೃತ್ತರಾದ ನೌಕರರಿಗೆ ಸರ್ಕಾರಿ ಆದೇಶದನ್ವಯ ಪಿಂಚಣಿ ನೀಡದಿರಲು ಕಾರಣಗಳೇನು; (ವಿವರ ನೀಡುವುದು)

(ಈ) ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಇರುವ ರಜಾ ಸೌಲಭ್ಯಗಳನ್ನು ಈ ತರಬೇತಿ ಸಂಸ್ಥೆಗಳ ನೌಕರರಿಗೆ ನೀಡದಿರಲು ಕಾರಣಗಳೇನು; (ವಿವರ ನೀಡುವುದು)

(ಉ) ಯಾವ ಕಾಲಮಿತಿಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಈ ನೌಕರರಿಗೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ? (ವಿವರ ನೀಡುವುದು)

## ಕಾನೂನು ಕಾಲೇಜುಗಳಿಗೆ ವೇತನಾನುದಾನದ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೦೪೫ (೪೪೫೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಾಮಾನ್ಯ ವರ್ಗದ ಅನುದಾನರಹಿತ ಕಾನೂನು ಪದವಿ ಕಾಲೇಜುಗಳೆಷ್ಟು; (ವಿವರ ನೀಡುವುದು)

(ಆ) ೧೯೮೬–೧೯೮೭ ರಿಂದ ೧೯೯೪–೯೫ರ ಅವಧಿಯಲ್ಲಿ ಪ್ರಾರಂಭವಾಗಿರುವ ಎಲ್ಲಾ ವರ್ಗದ ಕಾನೂನು ಕಾಲೇಜುಗಳೆಷ್ಟು; (ಕಾಲೇಜುವಾರು ವಿವರ ನೀಡುವುದು)

(ಇ) ಈ ಕಾನೂನು ಕಾಲೇಜುಗಳಿಗೆ ವೇತನಾನುದಾನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದರೆ, ಸದರಿ ಕಾಲೇಜುಗಳಿಗೆ ವೇತನಾನುದಾನವನ್ನು ನೀಡಲು ಸರ್ಕಾರ ಚಿಂತಿಸುವುದೇ;

(ಉ) ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ವೇತನಾನುದಾನ ನೀಡಲಾಗುತ್ತದೆ?

## ಅನುದಾನಿತ ಐ.ಟಿ.ಐ. ಸಂಸ್ಥೆಗಳ ನೌಕರರಿಗೆ ಪ್ರತಿ ತಿಂಗಳು ವೇತನ ಪಾವತಿಸದಿರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೦೪೬ (೪೪೪೯) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುದಾನಿತ ಐ.ಟಿ.ಐ. ತರಬೇತಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ / ಬೋಧಕೇತರರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಸದರಿ ನೌಕರರಿಗೆ ಪ್ರತಿ ತಿಂಗಳು ವೇತನ ನೀಡದಿರಲು ಕಾರಣಗಳೇನು; ಈ ನೌಕರರ ವೇತನಕ್ಕೆ ಬೇಕಾಗಿರುವ ಮಾಸಿಕ ವೆಚ್ಚವೆಷ್ಟು; (ವಿವರ ನೀಡುವುದು)

(ಇ) ಸದರಿ ನೌಕರರಿಗೆ ಪ್ರತಿ ತಿಂಗಳು ವೇತನ ನೀಡಲು ಯಾವ ಕ್ರಮ ಕೈಗೊಳ್ಳಲಾಗುವುದು;

(ಈ) ಈ ನೌಕರರಿಗೆ ಹೆಚ್.ಆರ್.ಎಂ.ಎಸ್. ಮೂಲಕ ನೇರವಾಗಿ ನೌಕರರ ಖಾತೆಗೆ ವೇತನ ಜಮಾ ಮಾಡಲು ಇರುವ ಸಮಸ್ಯೆಗಳೇನು;

(ಉ) ಯಾವ ಕಾಲಮಿತಿಯಲ್ಲಿ ಸದರಿ ನೌಕರರಿಗೆ ಹೆಚ್.ಆರ್.ಎಂ.ಎಸ್. ಮೂಲಕ ಪ್ರತಿ ತಿಂಗಳು ವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ? (ವಿವರ ನೀಡುವುದು)

## ವಿಶ್ವ ಕುಬ್ಜರ ಕ್ರೀಡಾ ಕೂಟದಲ್ಲಿ ಪದಕ ಪಡೆದವರಿಗೆ ಪುರಸ್ಕಾರ ನೀಡುವ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೪೦೪೭ (೪೬೦೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಶ್ವ ಕುಬ್ಜರ ಕ್ರೀಡಾ ಕೂಟದಲ್ಲಿ ಪದಕ ವಿಜೇತರಿಗೆ ಸರ್ಕಾರದಿಂದ ಪುರಸ್ಕಾರ, ಅನುದಾನ ಮಂಜೂರು ಮಾಡಿರುವ ಪ್ರಕರಣಗಳು ಇದೆಯೇ; ಇದ್ದಲ್ಲಿ, ಸಂಪೂರ್ಣವಾದ ಮಾಹಿತಿ ನೀಡುವುದು; ಇವರಿಗೆ ಪುರಸ್ಕಾರ ನೀಡುವ ಸರ್ಕಾರದ ಆದೇಶ ಅಥವಾ ಮಾರ್ಗಸೂಚಿ ಇದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ೨೦೧೩ರಲ್ಲಿ ನಡೆದ ವಿಶ್ವ ಕುಬ್ಜರ ಕ್ರೀಡಾ ಕೂಟದ ಪದಕ ವಿಜೇತರಿಗೆ ಸರ್ಕಾರದಿಂದ ನಗದು ಬಹುಮಾನ ನೀಡಲಾಗಿದೆಯೇ; ಹಾಗಿದ್ದಲ್ಲಿ, ವಿಶ್ವ ಕುಬ್ಜರ ಕ್ರೀಡಾ ಕೂಟದಲ್ಲಿ ಪದಕ ವಿಜೇತರಿಗೆ ಸರ್ಕಾರದಿಂದ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ?

## ನೆಡುತೋಪು ಕಾಮಗಾರಿ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೪೮ (೪೪೭೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೭–೧೮ನೇ ಸಾಲಿನಲ್ಲಿ ಕೆ.ಎಫ್.ಡಿ.ಎಫ್–೦೩ ಯೋಜನೆ ಅಡಿಯಲ್ಲಿ ಕೈಗೊಂಡಿರುವ ನೆಡುತೋಪು ಕಾಮಗಾರಿ ಎಷ್ಟು; ಎಷ್ಟು ಹೆಕ್ಟೇರ್‌ನಲ್ಲಿ ಕೈಗೊಳ್ಳಲಾಗಿದೆ; (ಮಾಹಿತಿ ನೀಡುವುದು)

(ಆ) ೨೦೧೬–೧೭ ಹಾಗೂ ೨೦೧೭–೧೮ನೇ ಸಾಲಿನಲ್ಲಿ ನೆಡುತೋಪು ಕಾಮಗಾರಿಗಳಿಗೆ ರಕ್ಷಣೆ ಮಾಡಲು ಇಲಾಖೆ ವತಿಯಿಂದ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೧೬–೧೭ ಹಾಗೂ ೨೦೧೭–೧೮ನೇ ಸಾಲಿನಲ್ಲಿ ನೆಡುತೋಪಿನ ನಿರ್ವಹಣೆ ಅಂದರೆ, ಮಣ್ಣಿನ ತೇವಾಂಶದ ಕೆಲಸ ಹಾಗೂ ಕಳೆ ತೆಗೆಯುವ ಕೆಲಸ ಮಾಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು)

(ಈ) ಅರಣ್ಯ ಇಲಾಖೆಯಲ್ಲಿ ನೋಂದಣಿ ಹೊಂದಿರುವ ಬೀದರ್ ಜಿಲ್ಲೆಯ ಅರಣ್ಯ ಗುತ್ತಿಗೆದಾರರು ಯಾರು? (ವಿವರ ನೀಡುವುದು)

## ಅರಣ್ಯ ಇಲಾಖೆಯಿಂದ ಬಂದ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೪೯ (೪೪೭೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯಿಂದ ಕಳೆದ ೨ ವರ್ಷಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಬಂದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು; ಯೋಜನಾವಾರು, ಬೀದರ್ ಜಿಲ್ಲೆಯ ತಾಲ್ಲೂಕುವಾರು ಸ್ಪಷ್ಟ ಮಾಹಿತಿ ನೀಡುವುದು;

(ಆ) ೨೦೧೭–೧೮ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಶಾಲಾ, ಕಾಲೇಜು ಹಾಗೂ ಸರ್ಕಾರಿ ಕಛೇರಿಗಳ ಆವರಣದಲ್ಲಿ ಗುಡ್ಡಗಾಡು ಮತ್ತು ರಸ್ತೆ ಪ್ರದೇಶಗಳಲ್ಲಿ ಸಸಿಗಳನ್ನು ನೆಡಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು;

(ಇ) ಬೀದರ್ ಜಿಲ್ಲೆಯ ಸುಮಾರು ಕಡೆಗಳಲ್ಲಿ, ಟ್ರ್ಯಾಕ್ಟರ್, ಜೆ.ಸಿ.ಬಿ (JCB) ಗಳಿಂದ ಅಗಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದ್ದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ಕಾರ್ಮಿಕರಿಂದ ಮಾಡಿಸಬೇಕಾದ ಕಾಮಗಾರಿಗಳನ್ನು ಯಂತ್ರಗಳ ಸಹಾಯದಿಂದ ಮಾಡಿಸುತ್ತಿರುವುದು ಸರಿಯೇ; ಇಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು? (ಮಾಹಿತಿ ನೀಡುವುದು)

## ತಾಲ್ಲೂಕು ಮಿನಿ ವಿಧಾನಸೌಧ ಕಟ್ಟಡಗಳಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೫೦ (೪೪೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಿಂದ ಮಿನಿ ವಿಧಾನಸೌಧ ಕಟ್ಟಡಗಳನ್ನು ಯಾವ ಯಾವ ತಾಲ್ಲೂಕುಗಳಲ್ಲಿ ನಿರ್ಮಾಣ ಮಾಡಲಾಗಿದೆ; (ವಿವರ ನೀಡುವುದು)

(ಆ) ಮಿನಿ ವಿಧಾನಸೌಧ ನಿರ್ಮಾಣಕ್ಕೆ ನೀಡಲಾಗುವ ಅನುದಾನವೆಷ್ಟು;

(ಇ) ನೀಡಲಾಗುತ್ತಿರುವ ಅನುದಾನಕ್ಕಿಂತ ಹೆಚ್ಚಿನ ಅನುದಾನವನ್ನು ಅಂದರೆ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿದ್ದು, ಹೆಚ್ಚುವರಿ ಅನುದಾನ ನೀಡಲು ಹಣಕಾಸು ಇಲಾಖೆಯ ಅನುಮೋದನೆ ಪಡೆಯಲಾಗುತ್ತಿದೆಯೇ;

(ಈ) ಕನಕಪುರ ತಾಲ್ಲೂಕು ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣಕ್ಕೆ ಇದುವರೆಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು?

## ಸರಾಸರಿ ಅರಣ್ಯ ಪ್ರದೇಶದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೫೧ (೪೪೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಒಟ್ಟಾರೆ ಭೂಪ್ರದೇಶದ ವಿಸ್ತೀರ್ಣ ಎಷ್ಟು; ಆ ಪೈಕಿ ಅರಣ್ಯ ಪ್ರದೇಶವೆಷ್ಟು; (ವಿವರ ನೀಡುವುದು)

(ಆ) ಪ್ರಕೃತಿ ವಿಕೋಪಗಳಾದ ಅತಿವೃಷ್ಠಿ ಮತ್ತು ಅನಾವೃಷ್ಠಿ ತಡೆಯಲು ಹಾಗೂ ಪರಿಸರ ಸಮತೋಲನ ಕಾಪಾಡಲು ವೈಜ್ಞಾನಿಕವಾಗಿ ಇರಬೇಕಾಗಿರುವ ಅರಣ್ಯ ಪ್ರದೇಶಗಳೆಷ್ಟು;

(ಇ) ಸದ್ಯದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಯಥೇಚ್ಛವಾಗಿ ಬೆಳೆದುನಿಂತಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು;(ವಿವರ ನೀಡುವುದು)

(ಈ) ಅರಣ್ಯ ಪ್ರದೇಶದ ರಾಷ್ಟ್ರೀಯ ಸರಾಸರಿ ಎಷ್ಟು; ರಾಜ್ಯದ ಸರಾಸರಿ ಎಷ್ಟು;

(ಉ) ರಾಷ್ಟ್ರೀಯ ಸರಾಸರಿಗೆ ಸರಿದೂಗಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಆನೆಗಳ ಹಾವಳಿಯನ್ನು ತಡೆಗಟ್ಟುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೦೫೨ (೪೫೮೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿಗೆ ಅರಣ್ಯಗಳಿಂದ ರೈತರ ಹೊಲ ಗದ್ದೆಗಳಿಗೆ ಆನೆಗಳ ಹಿಂಡು ದಾಳಿ ಮಾಡುವುದು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಿಂಡು ಹಿಂಡಾಗಿ ಬರುವ ಆನೆಗಳ ಹಾವಳಿ ತಡೆಯಲು ಯಾವ ರೀತಿಯ ಕ್ರಮಗಳು ಇವೆ;

(ಇ) ಪುಂಡಾನೆಗಳ ಸೆರೆಗೆ ಅರಿವಳಿಕೆ ಚುಚ್ಚುಮದ್ದನ್ನು ಉಪಯೋಗಿಸುವುದು ನಿಜವೇ;

(ಈ) ಅರಿವಳಿಕೆ ಚುಚ್ಚುಮದ್ದಿನ ಪೂರೈಕೆ ಬಗ್ಗೆ ವಿವರ ನೀಡುವುದು;

(ಉ) ಪ್ರಸ್ತುತ ಸದರಿ ಅರಿವಳಿಕೆ ಚುಚ್ಚುಮದ್ದಿನ ಕೊರತೆಯಿಂದ ಇದರ ಪೂರೈಕೆಯಾಗುತ್ತಿಲ್ಲ ಎನ್ನುವುದು ನಿಜವೇ; ನಿಜವಾಗಿದ್ದಲ್ಲಿ, ಕಾರಣವೇನು?

## ಬತ್ತಿಹೋದ ಕೆರೆಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೦೫೩ (೪೫೮೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಜಿಲ್ಲಾ ಕೇಂದ್ರಗಳಿಗೆ ಸೇರಿದ ಬತ್ತಿಹೋದ ಕೆರೆಗಳ ಸಂಖ್ಯೆ ಎಷ್ಟು;

(ಆ) ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಬಿ.ಕೋಳಿವಾಡ ರವರ ನೇತೃತ್ವದ ಸದನ ಸಮಿತಿಯು ಕೆರೆ ಒತ್ತುವರಿ ಕುರಿತಂತೆ ಅಂತಿಮ ವರದಿಯನ್ನು ನೀಡಿದೆಯೇ;

(ಇ) ಸದರಿ ಸಮಿತಿಯು ಮಧ್ಯಂತರ ವರದಿಯನ್ನು ನೀಡಿದ್ದಲ್ಲಿ, ಒತ್ತುವರಿ ಕುರಿತಂತೆ ಸಂಕ್ಷಿಪ್ತ ವಿವರ ನೀಡುವುದು;

(ಈ) ಬತ್ತಿಹೋದ ಕೆರೆಗಳನ್ನು ಡಿನೋಟಿಫೈ ಮಾಡುವ ಕುರಿತಂತೆ ಪ್ರಸ್ತಾವವನ್ನು ರೂಪಿಸಿ, ಡಿನೋಟಿಫೈ ಮಾಡಲು ಸರ್ಕಾರ ಮುಂದಾಗಿರುವುದು ನಿಜವೇ? (ವಿವರ ನೀಡುವುದು)

## ಕೆ.ಆರ್.ಎಸ್. ಜಲಾಶಯದ ಹಿನ್ನೀರಿನ ಪ್ರದೇಶ ಭೂಸ್ವಾಧೀನ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೦೫೪ (೪೫೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣರಾಜ ಸಾಗರ ಜಲಾಶಯದ ಹಿನ್ನೀರಿನ ಪ್ರದೇಶ ಕುರಿತಂತೆ, ಮೈಸೂರು ಸಂಸ್ಥಾನದಿಂದ ಭೂಸ್ವಾಧೀನಪಡಿಸಿಕೊಂಡ ಪ್ರದೇಶದ ವಿಸ್ತಾರದ ಕುರಿತು ವಿವರ ನೀಡುವುದು;

(ಆ) ಕೃಷ್ಣರಾಜ ಸಾಗರ ಜಲಾಶಯದ ಹಿನ್ನೀರಿನ ಪ್ರದೇಶದ ಭೂಸ್ವಾಧೀನ ಕುರಿತಂತೆ, ಮೈಸೂರು ಸಂಸ್ಥಾನದಿಂದ ಭೂಸ್ವಾಧೀನ ಪಡಿಸಿಕೊಂಡ ದಾಖಲೆಗಳು ಲಭ್ಯವಿಲ್ಲದಿರುವುದು ನಿಜವೇ; ಇದಕ್ಕೆ ಕಾರಣವೇನು;

(ಇ) ಸೂಕ್ತ ದಾಖಲೆಗಳು ಲಭ್ಯವಿಲ್ಲದಿರುವ ಕಾರಣದಿಂದ ಹಿನ್ನೀರಿನ ಪ್ರದೇಶದಲ್ಲಿ ಭೂಗಳ್ಳರ ಹಾವಳಿ ಹೆಚ್ಚಾಗಿ, ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ಸಂಬಂಧ ಹಿನ್ನೀರಿನ ಪ್ರದೇಶವನ್ನು ಉಳಿಸಿಕೊಳ್ಳಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು?

## ಆಯುರ್ವೇದ ಆಸ್ಪತ್ರೆಗೆ ಕಟ್ಟಡ ನೀಡುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೦೫೫ (೪೫೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಎಡೆಯೂರು ಹೋಬಳಿ, ಚೊಟ್ನಹಳ್ಳಿ ಗ್ರಾಮದ ಸರ್ಕಾರಿ ಜಾಗವಾಗಿರುವ ಸರ್ವೆ ನಂಬರ್ ೫೬ ರಲ್ಲಿನ ೨ ಎಕರೆ ಜಮೀನನ್ನು ಆಯುರ್ವೇದ ಆಸ್ಪತ್ರೆ ಕಟ್ಟಡಕ್ಕೆ

ಕೊಡುವ ಬಗ್ಗೆ ನಾಗಸಂದ್ರ ಗ್ರಾಮ ಪಂಚಾಯ್ತಿಯಿಂದ ೧೯೯೮ರಲ್ಲಿ ಕುಣಿಗಲ್ ತಾಲ್ಲೂಕು ತಹಶೀಲ್ದಾರ್‌ರವರಿಗೆ ಕೋರಿರುವುದು ನಿಜವೇ;

(ಆ) ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ೨೦೧೪ರಲ್ಲಿ ಸದರಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿರುವ ಕುರಿತು ಹಾಗೂ ೨ ಎಕರೆ ಜಮೀನು ಮಂಜೂರು ಮಾಡಿ, ಆರೋಗ್ಯ ಇಲಾಖೆಗೆ ವರ್ಗಾಯಿಸಿ, ಆರ್.ಟಿ.ಸಿ. ಯಲ್ಲಿ ಸೇರ್ಪಡೆ ಮಾಡುವಂತೆ ತಹಶೀಲ್ದಾರ್, ಕುಣಿಗಲ್ ಇವರಿಗೆ ಕೋರಿ ಪತ್ರ ಬರೆದಿರುವುದು ನಿಜವೇ;

(ಇ) ನಿಜವಾಗಿದ್ದಲ್ಲಿ, ಸದರಿ ಸ್ಥಳವನ್ನು ಆರೋಗ್ಯ ಇಲಾಖೆಗೆ ನೀಡುವ ವಿಷಯದಲ್ಲಿ ೩ ವರ್ಷ ವಿಳಂಬವಾಗಲು ಕಾರಣವೇನು; ಈ ಸಂಬಂಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ, ಮುಂದೆ ಸದರಿ ಜಮೀನನ್ನು ಆರೋಗ್ಯ ಇಲಾಖೆಗೆ ವರ್ಗಾಯಿಸುವಲ್ಲಿ ಜರೂರು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ? (ವಿವರ ನೀಡುವುದು)

## ವಸತಿ ನಿವೇಶನ ಹಂಚಿಕೆ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೦೫೭ (೪೫೭೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ವಸತಿ ಇಲಾಖೆಗೆ ಯಾವ ಯಾವ ಯೋಜನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಅನುದಾನಗಳು ಯಾವ ಪ್ರಮಾಣದಲ್ಲಿ ಹಂಚಿಕೆ ಆಗಿರುತ್ತದೆ; ಇವುಗಳಲ್ಲಿ ಬಿಡುಗಡೆ ಆಗಿರುವ ಹಣವೆಷ್ಟು;

(ಆ) ಕಳೆದ ನಾಲ್ಕು ವರ್ಷಗಳಲ್ಲಿ ವಸತಿ ಇಲಾಖೆಯು ರಾಜ್ಯದಲ್ಲಿ ಎಷ್ಟು ನಗರ ವಸತಿ, ಗ್ರಾಮೀಣ ವಸತಿ ಹಾಗೂ ಇತರೆ ವಸತಿಗಳ ಯೋಜನೆಯಡಿಯಲ್ಲಿ ನಿವೇಶನ ಮತ್ತು ಮನೆಗಳನ್ನು ನಿರ್ಮಾಣ ಮಾಡಿರುತ್ತದೆ; ಇವುಗಳಲ್ಲಿ ಹಂಚಿಕೆಯಾಗಿರುವ ನಿವೇಶನ ಮತ್ತು ಮನೆಗಳು ಎಷ್ಟು; ಹಂಚಿಕೆಗೆ ಬಾಕಿ ಇರುವ ನಿವೇಶನ ಮತ್ತು ಮನೆಗಳು ಎಷ್ಟು;

(ಇ) ವಸತಿ ಇಲಾಖೆಯು ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಭೂ ರಹಿತ ಕಾರ್ಮಿಕರಿಗೆ ವಸತಿ ನಿವೇಶನ ಮತ್ತು ಮನೆಗಳನ್ನು ಹಂಚಿಕೆ ಮಾಡಿರುತ್ತದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಕರ್ನಾಟಕ ಗೃಹ ಮಂಡಳಿಯು ೦೧/೦೪/೨೦೧೬ರಿಂದ ಇಲ್ಲಿಯವರೆಗೆ ಎಷ್ಟು ಖಾಸಗಿ ಸಂಸ್ಥೆಗಳೊಂದಿಗೆ ವಸತಿ ನಿವೇಶನ ಮತ್ತು ಮನೆಗಳನ್ನು/ ಫ್ಲ್ಯಾಟ್‌ಗಳನ್ನು ನಿರ್ಮಾಣ ಮಾಡಿರುತ್ತದೆ; ಇವರಿಗೆ ಇಲ್ಲಿಯವರೆಗೆ ಪಾವತಿ ಮಾಡಿರುವ ಹಣವೆಷ್ಟು; ಬಾಕಿಯಿರುವ ಹಣವೆಷ್ಟು; (ವಿವರವಾದ ಪಟ್ಟಿ ನೀಡುವುದು)

(ಉ) ಕರ್ನಾಟಕ ಗೃಹ ಮಂಡಳಿಯು ಖಾಸಗಿಯವರೊಂದಿಗೆ ಅಭಿವೃದ್ಧಿ ಪಡಿಸಿರುವ ವಸತಿ ನಿವೇಶನ ಮತ್ತು ಮನೆ/ಫ್ಲ್ಯಾಟ್‌ಗಳ ಮೇಲೆ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಹಣ ವಿನಿಯೋಗ ಮಾಡಿರುತ್ತದೆ; ಇವುಗಳ ಮಾರಾಟದಿಂದ ಗೃಹ ಮಂಡಳಿಗೆ ಬಂದಿರುವ ಲಾಭ ಎಷ್ಟು; ನಷ್ಟವುಂಟಾಗಿದ್ದಲ್ಲಿ, ಇದರ ಮೊತ್ತವೆಷ್ಟು; ಕರ್ನಾಟಕ ಗೃಹಮಂಡಳಿಯು ಪ್ರಸಕ್ತ ಸಾಲಿನಲ್ಲಿ ಎಷ್ಟು ಖಾಸಗಿ ಸಂಸ್ಥೆಗಳೊಂದಿಗೆ ವಸತಿ ನಿವೇಶನ ಮತ್ತು ಮನೆ/ಫ್ಲ್ಯಾಟ್‌ಗಳ ಅಭಿವೃದ್ಧಿಗೆ ಕರಾರನ್ನು ಹೊಂದಿರುತ್ತದೆ?

## ಕೃಷಿ ಭೂಮಿ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೦೫೭ (೪೫೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೦೧/೦೪/೨೦೧೩ ರಿಂದ ಇಲ್ಲಿಯವರೆಗೆ ತುಮಕೂರು ಜಿಲ್ಲೆಯಲ್ಲಿ ಬಗರ್ ಹುಕುಂ ಸಮಿತಿಗಳ ಮೂಲಕ ರೈತರಿಗೆ ಎಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ; ಬಾಕಿ ಇರುವ ಅರ್ಜಿಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ ಇರುತ್ತದೆ; ಸರ್ಕಾರಿ ಭೂಮಿಯ ಹಂಚಿಕೆ ಕೋರಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳು ಬಾಕಿ ಇರುತ್ತವೆ;

(ಇ) ತುಮಕೂರು ಜಿಲ್ಲೆಯ ತಿಪಟೂರು ಉಪ ವಿಭಾಗದ ಸಹಾಯಕ ಕಂದಾಯಾಧಿಕಾರಿಗಳ ನ್ಯಾಯಾಲಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಎಷ್ಟು ಮತ್ತು ಯಾವ ವಿಧದ ಪ್ರಕರಣಗಳು ಬಾಕಿ ಇರುತ್ತದೆ; ನಾಲ್ಕು ವರ್ಷಕ್ಕಿಂತ ಎಷ್ಟು ಹಳೆಯ ಪ್ರಕರಣಗಳು ಈ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇರುತ್ತವೆ; ಇಲ್ಲಿಯವರೆಗೆ ಎಷ್ಟು ಪ್ರಕರಣಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ವಿಲೇವಾರಿ ಮಾಡಲಾಗಿದೆ;

(ಈ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತಾಲ್ಲೂಕು ದಂಡಾಧಿಕಾರಿಗಳ ಮುಂದೆ ಕಳೆದ ಮೂರು ವರ್ಷಗಳಲ್ಲಿ ಬಾಕಿಯಿರುವ ರೆವೆನ್ಯೂ ಪ್ರಕರಣಗಳು ಎಷ್ಟು; ವಿಲೇವಾರಿಯಾಗಿರುವ ಪ್ರಕರಣಗಳೆಷ್ಟು; ಮೂರು ವರ್ಷಗಳಲ್ಲಿ ತಾಲ್ಲೂಕು ದಂಡಾಧಿಕಾರಿಗಳು ಎಷ್ಟು ದಿನ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸಿರುತ್ತಾರೆ;

(ಉ) ದಿನಾಂಕ:೦೧/೦೪/೨೦೧೫ ರಿಂದ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತಹಶೀಲ್ದಾರ್‌ರವರು ಬರ ಪರಿಹಾರದ ಎಷ್ಟು ಕಾಮಗಾರಿಗಳನ್ನು ಕೈಗೊಂಡಿರುತ್ತಾರೆ; ಸದರಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು;

(ಊ) ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ತಿಪಟೂರು ಉಪ ವಿಭಾಗಾಧಿಕಾರಿಗಳು ಪರಿವೀಕ್ಷಣೆ ಮಾಡಿರುತ್ತಾರೆಯೇ? (ವಿವರ ನೀಡುವುದು)

## ಬೈರಗೊಂಡ್ಲು ಜಲಾಶಯ ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೦೫೮ (೪೫೬೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಉದ್ದೇಶಿತ ಬೈರಗೊಂಡ್ಲು ಜಲಾಶಯದ ನೀರು ಸಂಗ್ರಹಣೆಯ ಸಾಮರ್ಥ್ಯ ಎಷ್ಟು; ಈ ಯೋಜನೆಯಲ್ಲಿ ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳ ಎಷ್ಟು ಗ್ರಾಮಗಳಿಗೆ ಮತ್ತು ಪ್ರದೇಶಗಳಿಗೆ ಕುಡಿಯಲು ಮತ್ತು ಕೃಷಿಗಾಗಿ ನೀರನ್ನು ಒದಗಿಸಲಾಗುವುದು;

(ಆ) ಬೈರಗೊಂಡ್ಲು ಜಲಾಶಯ ನಿರ್ಮಾಣದ ಪರಿಷ್ಕೃತ ಯೋಜನಾ ವರದಿಯ ಅಂದಾಜು ಮೊತ್ತವೆಷ್ಟು; ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಇವುಗಳಿಗೆ ಬಿಡುಗಡೆಯಾಗಿರುವ ಹಣವೆಷ್ಟು; ಸದರಿ ಯೋಜನೆಯ ಮೂಲ ಅಂದಾಜು ಮೊತ್ತವೆಷ್ಟು; ಈ ಯೋಜನೆಯಲ್ಲಿ ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ನೀರು ತುಂಬಿಸಲು ಅವಕಾಶ ಇರುತ್ತದೆಯೇ; (ವಿವರ ನೀಡುವುದು)

(ಇ) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಇದರ ಅಡಿಯಲ್ಲಿ ಬೈರಗೊಂಡ್ಲು ಜಲಾಶಯದ ಎಷ್ಟು ಹಂತದ ಪ್ಯಾಕೇಜ್ ಕಾಮಗಾರಿಗಳನ್ನು ತುಮಕೂರು ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ; ಇವುಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು;

(ಈ) ಬೈರಗೊಂಡ್ಲು ಜಲಾಶಯಕ್ಕೆ ಇಲ್ಲಿಯವರೆಗೆ ಎಷ್ಟು ಭೂಸ್ವಾಧೀನವನ್ನು ಮಾಡಲಾಗಿರುತ್ತದೆ; ಭೂಸ್ವಾಧೀನ ಪ್ರಕ್ರಿಯೆಗೆ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ; ಭೂಸ್ವಾಧೀನದ ಮೂಲ ರೈತರಿಗೆ ಪರಿಹಾರವನ್ನು ನೀಡಲಾಗಿದೆಯೇ; ನೀಡಿದ್ದಲ್ಲಿ, ಎಷ್ಟು ಮೊತ್ತದ ಹಣ ಮತ್ತು ಯಾವ ಯಾವ ರೈತರಿಗೆ ಪರಿಹಾರ ನೀಡಲಾಗಿರುತ್ತದೆ; ಬಾಕಿ ಇರುವ ಪ್ರಕರಣಗಳೆಷ್ಟು;

(ಉ) ಬೈರಗೊಂಡ್ಲು ಜಲಾಶಯದ ಯೋಜನೆಯಲ್ಲಿ ಸಂತ್ರಸ್ತರಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಯಾವ ಏಜೆನ್ಸಿಯ ಮುಖಾಂತರ ವರದಿ ಪಡೆಯಲಾಗಿದೆ; ನಿಗಮವು ಈ ಯೋಜನೆಯಲ್ಲಿ ನಿಯಮಾವಳಿಗಳನ್ವಯ ಕ್ರಮಗಳನ್ನು ಕೈಗೊಂಡಿದೆಯೇ;

(ಊ) ಬೈರಗೊಂಡ್ಲು ಜಲಾಶಯದ ಯೋಜನೆಯಲ್ಲಿ ರಾಜ್ಯ ಸರ್ಕಾರವು ಆರ್ ಅಂಡ್ ಆರ್ ಸಮಿತಿಯನ್ನು ರಚಿಸುವ ಸಮಯದಲ್ಲಿ ಈ ವ್ಯಾಪ್ತಿಯ ವಿಧಾನ ಪರಿಷತ್ತಿನ ಸದಸ್ಯರನ್ನು ಸಮಿತಿಗೆ ಸದಸ್ಯರನ್ನಾಗಿ ನೇಮಿಸಿದೆಯೇ; ನೇಮಿಸದೇ ಇದ್ದಲ್ಲಿ, ಕಾರಣವೇನು?

## ಐ.ಟಿ.ಐ. ಕಾಲೇಜುಗಳ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೦೫೫ (೪೫೬೬) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಕಾರ್ಮಿಕ ಇಲಾಖೆಯ ಅಡಿಯಲ್ಲಿ ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಮತ್ತು ಅರೆ ಸರ್ಕಾರಿ ಹಾಗೂ ಖಾಸಗಿ ಐ.ಟಿ.ಐ. ಕಾಲೇಜುಗಳು ಎಷ್ಟು; ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಉಪನ್ಯಾಸಕರ ಸಂಖ್ಯೆ ಎಷ್ಟು;

(ಆ) ಕಾರ್ಮಿಕ ಇಲಾಖೆಯ ಸರ್ಕಾರಿ ಐ.ಟಿ.ಐ. ಕಾಲೇಜುಗಳಲ್ಲಿರುವ ಪ್ರಾಂಶುಪಾಲರ ಹುದ್ದೆಗಳು ಎಷ್ಟು; ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತದೆ; ಸರ್ಕಾರಿ ಐ.ಟಿ.ಐ. ಕಾಲೇಜುಗಳಲ್ಲಿರುವ ಉಪನ್ಯಾಸಕರಿಗೆ ಎಷ್ಟು ವರ್ಷಕ್ಕೆ ಒಮ್ಮೆ ಪದೋನ್ನತಿ ನೀಡಲಾಗುವುದು; ಹಾಲಿ ಎಷ್ಟು ಉಪನ್ಯಾಸಕರಿಗೆ ಪದೋನ್ನತಿ ನೀಡಬೇಕಾಗಿದೆ;

(ಇ) ರಾಜ್ಯದಲ್ಲಿ ಕಳೆದ ಮೂರು ಶೈಕ್ಷಣಿಕ ವರ್ಷಗಳಲ್ಲಿ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಐ.ಟಿ.ಐ. ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ; ಇವುಗಳಲ್ಲಿ ಖಾಸಗಿ ಕಾಲೇಜುಗಳಲ್ಲಿ ಪರೀಕ್ಷೆ ಪಡೆದವರ ಸಂಖ್ಯೆ ಎಷ್ಟು; ಈ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆಯೇ; ನೀಡದೆ ಇದ್ದಲ್ಲಿ, ಕಾರಣವೇನು;

(ಈ) ಕಾರ್ಮಿಕ ಇಲಾಖೆಯು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯದ ಕಾರ್ಯಕ್ರಮದಡಿಯಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕಾರ್ಯಾಗಾರಗಳನ್ನು ೦೧–೦೪–೨೦೧೬ ರಿಂದ ಇಲ್ಲಿಯವರೆಗೆ ನಡೆಸಿರುತ್ತದೆ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಕಾರ್ಮಿಕ ಇಲಾಖೆಯು ೦೧.೦೪.೨೦೧೬ ರಿಂದ ಇಲ್ಲಿಯವರೆಗೆ ತಾಲ್ಲೂಕುವಾರು ಎಷ್ಟು ಉದ್ಯೋಗ ಮೇಳಗಳನ್ನು ಆಯೋಜನೆ ಮಾಡಿರುತ್ತದೆ; ತುಮಕೂರು,ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಆಯೋಜನೆ ಮಾಡಿದ ಉದ್ಯೋಗ

ಮೇಳಗಳು ಎಷ್ಟು; ತುಮಕೂರು ಜಿಲ್ಲೆ, ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕಳೆದ ೦೨ ವರ್ಷಗಳಲ್ಲಿ ಉದ್ಯೋಗ ಮೇಳ ಆಯೋಜನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಇದರಿಂದ ಎಷ್ಟು ಮಂದಿಗೆ ಉದ್ಯೋಗಾವಕಾಶ ದೊರೆತಿರುತ್ತದೆ?

## ಕ್ರೀಡಾ ಚಟುವಟಿಕೆಗಳ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೦೬೦ (೪೫೬೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯುವಜನ ಕಲ್ಯಾಣ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿಯೇತರರಿಗೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾರ್ಯಕ್ರಮಗಳನ್ನು ನಿರ್ವಹಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) ಇವುಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

(ಆ) ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆಯ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ದೈಹಿಕ ಶಿಕ್ಷಣಕ್ಕೆ ಎಷ್ಟು ಹಣ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ; ಇದರಲ್ಲಿ ಎಷ್ಟು ಹಣ ವಿನಿಯೋಗಿಸಲಾಗಿದೆ; ಉಳಿದಿರುವ ಹಣವೆಷ್ಟು; ಪ್ರಸಕ್ತ ಸಾಲಿನಲ್ಲಿ ದೈಹಿಕ ಶಿಕ್ಷಣಕ್ಕೆ ಇಲ್ಲಿಯವರೆಗೆ ಎಷ್ಟು ಹಣ ವಿನಿಯೋಗಿಸಲಾಗಿದೆ;

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾಗಿರುವ ಹಣವೆಷ್ಟು; ಇದರಲ್ಲಿ ಬಳಕೆಯಾಗಿರುವ ಹಣವೆಷ್ಟು; ಬಳಕೆ ಆಗದೇ ಇದ್ದಲ್ಲಿ, ಇದಕ್ಕೆ ಕಾರಣವೇನು;

(ಈ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ದೈಹಿಕ ಶಿಕ್ಷಣ ಮಹಾ ವಿದ್ಯಾಲಯಗಳೆಷ್ಟು; ರಾಜ್ಯ ಸರ್ಕಾರವು ಪ್ರತಿ ವರ್ಷ ಎಷ್ಟು ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಎಷ್ಟು ಪ್ರಮಾಣದಲ್ಲಿ ವಾರ್ಷಿಕ ಅನುದಾನ ನೀಡುತ್ತಿದೆ;

(ಉ) ಕೇಂದ್ರ ಸರ್ಕಾರದಿಂದ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಗೆ ಹಂಚಿಕೆಯಾಗುತ್ತಿರುವ ವಾರ್ಷಿಕ ಅನುದಾನ ಎಷ್ಟು; ಅವುಗಳಲ್ಲಿ ಬಳಕೆಯಾಗಿರುವ ಮತ್ತು ಬಳಕೆಯಾಗದೇ ಉಳಿದಿರುವ ಅನುದಾನ ಎಷ್ಟು;

(ಊ) ರಾಜ್ಯ ಸರ್ಕಾರವು ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಎಷ್ಟು ವಸತಿ ಶಾಲೆಗಳನ್ನು ತೆರೆದಿರುತ್ತದೆ; ಈ ವಸತಿ ಶಾಲೆಗಳಲ್ಲಿ ಎಷ್ಟು ಕ್ರೀಡಾಪಟುಗಳಿಗೆ ಪ್ರವೇಶ ನೀಡಲಾಗಿದೆ; ಇಲಾಖೆಯು ಪ್ರತಿ ವರ್ಷ ಎಷ್ಟು ಕ್ರೀಡಾಪಟುಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದೆ; ಮತ್ತು ಅದರ ಒಟ್ಟು ಮೊತ್ತವೆಷ್ಟು?

## ಜಿಲ್ಲಾಧಿಕಾರಿಗಳ ತಾಲ್ಲೂಕು ಗ್ರಾಮಗಳ ಭೇಟಿ ಕುರಿತು

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೬೧ (೪೪೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಆರು ತಿಂಗಳಿನಲ್ಲಿ ರಾಜ್ಯದಾದ್ಯಂತ ಹೆಚ್ಚಿನ ಮಳೆ ಬಿದ್ದು, ಅನಾಹುತಗಳು ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಪ್ರಕೃತಿ ವಿಕೋಪ ನಿರ್ವಹಣೆಗೆ ರಾಜ್ಯ ಸರ್ಕಾರ ೨೦೧೮ನೇ ಸಾಲಿನಲ್ಲಿ ಖರ್ಚು ಮಾಡಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಎಷ್ಟು ಜಿಲ್ಲಾಧಿಕಾರಿಗಳು ಹಾನಿಗೊಳಗಾದ ತಾಲ್ಲೂಕು, ಗ್ರಾಮಗಳಿಗೆ ಭೇಟಿ ನೀಡಿದ್ದಾರೆ? (ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿರುವ ಕೂಲಿ ಕಾರ್ಮಿಕರ ಬಗ್ಗೆ

**ಶ್ರೀ ಸೋಮಣ್ಣ ಎಂ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೨ (೪೫೯೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಕೂಲಿ ಕಾರ್ಮಿಕರ ಅಂಕಿ ಸಂಖ್ಯೆ ಎಷ್ಟು; ಅದರಲ್ಲಿ ಪುರುಷ, ಮಹಿಳೆ, ಅಂಗವಿಕಲರ ವರ್ಗವಾರು ಮಾಹಿತಿ ನೀಡುವುದು;

(ಆ) ಮಹಿಳೆ ಮತ್ತು ಅಂಗವಿಕಲ ಕೂಲಿ ಕಾರ್ಮಿಕರಿಗೆ ಸರ್ಕಾರದಿಂದ ಸಿಗುತ್ತಿರುವ ಸೌಲಭ್ಯಗಳಾವುವು; ಅಥವಾ ಯಾವುದಾದರೂ ವಿಶೇಷ ಯೋಜನೆಗಳನ್ನು ರೂಪಿಸುವ ಇಂಗಿತ ಸರ್ಕಾರದ ಮುಂದಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಇ) ಆರೋಗ್ಯ ವಿಮಾ ಕಾರ್ಡುಗಳ ಬೇಡಿಕೆ ಇದ್ದರೂ ಸಹ, ಎಲ್ಲಾ ವರ್ಗದ ಕೂಲಿ ಕಾರ್ಮಿಕರಿಗೆ ಸರಿಯಾಗಿ ಹಂಚಿಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿನ ಗ್ರಾಮ ಲೆಕ್ಕಾಧಿಕಾರಿಗಳ ಬಗ್ಗೆ

**ಶ್ರೀ ಸೋಮಣ್ಣ ಎಂ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೩ (೪೫೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ಒದಗಿಸುವುದು; (ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮತ್ತು ಜಿಲ್ಲಾವಾರು ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ಕಡಿಮೆ ಇರುವುದರಿಂದ, ಅಲ್ಲಿನ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮ ಕೈಗೊಂಡಿದ್ದೀರಿ;

(ಇ) ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರ್ ಕಛೇರಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವರ್ಗಾವಾರು, ಹುದ್ದೆವಾರು ಮಾಹಿತಿ ನೀಡುವುದು)

## ಹಾವೇರಿ ಜಿಲ್ಲೆಯ ವೃದ್ಧಾಪ್ಯ ವೇತನ, ಅಂಗವಿಕಲ ಹಾಗೂ ಇನ್ನಿತರ ವೇತನದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೪ (೪೪೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲರ ವೇತನವನ್ನು ಎಷ್ಟು ಫಲಾನುಭವಿಗಳು ಪಡೆಯುತ್ತಿದ್ದಾರೆ; ಇದುವರೆಗೂ ವೇತನಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಇರಲು ಕಾರಣಗಳೇನು; (ತಾಲ್ಲೂಕುವಾರು, ಬಾಕಿ ಇರುವ ಅರ್ಜಿಗಳವಾರು, ಹೆಸರು ಸಂಪೂರ್ಣ ವಿವರ ನೀಡುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ವೃದ್ಧಾಪ್ಯ ವೇತನ ಮಂಜೂರಾಗದೇ ಇರುವವರು ಧರಣಿ ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

## ರಾಜ್ಯದಲ್ಲಿನ ಸರ್ವೇಯರ್‌ಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೫ (೪೫೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರಕಾರಿ ಸರ್ವೇಯರ್‌ಗಳ ಸಂಖ್ಯೆ ಹಾಗೂ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಸರ್ವೇಯರ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು ಮತ್ತು ಹಾವೇರಿ ಜಿಲ್ಲೆಯ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ಸರ್ವೇಯರ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ಅಲ್ಲಿನ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮ ಕೈಗೊಂಡಿದ್ದೀರಿ;

(ಇ) ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಹುದ್ದುಬಸ್ತಿಗೆ ಬಂದ ಅರ್ಜಿಗಳು ಎಷ್ಟು; ಅದರಲ್ಲಿ ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮತ್ತು ಗ್ರಾಮವಾರು ವಿವರ ನೀಡುವುದು)

## ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಬರ ಘೋಷಣೆ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೬ (೪೪೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಬಾರಿ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿದೆ;

(ಆ) ಬರ ತಾಲ್ಲೂಕುಗಳ ಪಟ್ಟಿ ನೀಡುವುದು ಹಾಗೂ ಬರ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಪ್ರಸ್ತುತ ಸಾಲಿನಲ್ಲಿ ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಬೆಳೆ ಹಾನಿ ಹಾಗೂ ಜೀವ ಹಾನಿಗಳ ಸಂಪೂರ್ಣ ವಿವರ ನೀಡುವುದು;

(ಈ) ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ನಿವಾರಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ;

(ಉ) ಅತಿವೃಷ್ಟಿ, ಅನಾವೃಷ್ಟಿ ನಿರ್ವಹಣೆಗೆ ಕೇಂದ್ರದಿಂದ ನೆರವು ಪಡೆಯಲಾಗಿದೆಯೇ?

## ಅಕ್ರಮ–ಸಕ್ರಮದ ಅನುಷ್ಠಾನ ನೆನೆಗುದಿಗೆ ಬಿದ್ದಿರುವ ಬಗ್ಗೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೭ (೪೪೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಕ್ರಮ–ಸಕ್ರಮ ಯೋಜನೆಯ ಅನುಷ್ಠಾನವು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಇಂತಹ ಅಕ್ರಮ–ಸಕ್ರಮ ಪ್ರಕರಣಗಳೇನು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಇ) ಅಕ್ರಮ–ಸಕ್ರಮಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು; ಈಗಾಗಲೇ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿದೆ;

(ಈ) ವಿಳಂಬಕ್ಕೆ ಕಾರಣಗಳೇನು, ಹಾಗಿದ್ದಲ್ಲಿ, ಯಾವಾಗ ಇದಕ್ಕೆ ತಾತ್ವಿಕ ಅಂತ್ಯವನ್ನು ಕಾಣಿಸಲಾಗುತ್ತದೆ; ಈ ಅಕ್ರಮ–ಸಕ್ರಮದಿಂದ ರಾಜ್ಯದಲ್ಲಿ ಎಷ್ಟು ಜನರಿಗೆ ಇದರ ಲಾಭ ದೊರೆಯಲಿದೆ? (ಜಿಲ್ಲಾವಾರು ವಿವರ ನೀಡುವುದು)

## ರಾಜ್ಯದಲ್ಲಿರುವ ಗೋಮಾಳಗಳ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೬೮ (೪೪೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಗೋಮಾಳಗಳಿವೆ; ಯಾವ ಯಾವ ಸ್ಥಳಗಳಲ್ಲಿವೆ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ಪ್ರಸ್ತುತ ಇರುವ ಸರ್ಕಾರಿ ಗೋಮಾಳಗಳನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳು ದಾಖಲಾಗಿವೆಯೇ; ದಾಖಲಾಗಿದ್ದರೆ, ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರಣೆ ನೀಡುವುದು)

## ತೀವ್ರತರದ ಕುಡಿಯುವ ನೀರಿನ ಅಭಾವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೭೯ (೪೪೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರ ತರದ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಆ) ಮಳೆಯಾಗಿರುವುದರಿಂದ ಕೆರೆ–ಕಟ್ಟೆಗಳು ತುಂಬಿ ಕೊಳವೆಬಾವಿಗಳು, ಜೀವ ಜಲಗಳು ತುಂಬದೇ ಇರುವುದು ನಿಜವೇ; ಈ ನಿಟ್ಟಿನಲ್ಲಿ ಮಳೆಕೊಯ್ಲು ಯೋಜನೆ ಹಾಗೂ ಮಳೆ ನೀರು ಸಂಗ್ರಹ, ಇಂಗು ಗುಂಡಿಗಳ ನಿರ್ಮಾಣ, ಇತ್ಯಾದಿ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಹಮ್ಮಿಕೊಳ್ಳಲಾಗಿತ್ತೆ;

(ಇ) ಮಳೆ ನೀರು ಸಂಗ್ರಹ, ಇಂಗು ಗುಂಡಿಗಳ ನಿರ್ಮಾಣ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನವಾಗದೇ ಇರುವುದು ಇದಕ್ಕೆ ಕಾರಣವಾಗಿದೆಯೇ; ಹಾಗಿದ್ದಲ್ಲಿ, ಇಂತಹ ಕಾರ್ಯಕ್ರಮಗಳನ್ನು ಕಡ್ಡಾಯಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

## ರಾಜ್ಯದಲ್ಲಿ ಪ್ರಸ್ತುತ ವರ್ಷದಲ್ಲಿ ಮಳೆಯಿಂದಾದ ಹಾನಿಯ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೭೦ (೪೪೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ವರ್ಷ ಮಳೆಯಿಂದ ಹಾನಿಯಾದ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕೊಡಗು ಜಿಲ್ಲೆಯಲ್ಲಿ ಮಳೆಯಿಂದಾದ ಹಾನಿಗಳಿಗೆ ಪರಿಹಾರವನ್ನು ನೀಡಲಾಗಿದೆಯೇ; ಈ ಪರಿಹಾರ ಧನವನ್ನು ನೀಡಲು ಇರುವ ಮಾನದಂಡಗಳೇನು; ಕೊಡಗು ಜಿಲ್ಲೆಯಲ್ಲಿ ನೀಡಲಾದ ಪರಿಹಾರ ಧನದ ತಾಲ್ಲೂಕುವಾರು ಮಾಹಿತಿ ನೀಡುವುದು;

(ಇ) ಪರಿಹಾರ ನೀಡಲು ಬಾಕಿಯಿದ್ದಲ್ಲಿ, ಬಾಕಿಯಿರುವ ಪ್ರಕರಣಗಳಾವುವು; ಅವುಗಳಿಗೆ ಬೇಕಾದ ಪರಿಹಾರ ಧನವೆಷ್ಟು;

(ಈ) ಬಾಕಿ ಪರಿಹಾರ ಧನವನ್ನು ಯಾವ ನಿಗಧಿತ ಅವಧಿಯೊಳಗೆ ನೀಡಲು ಕ್ರಮವಹಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿನ ಅರಣ್ಯ ಇಲಾಖೆಯ ಜಾಗದಲ್ಲಿರುವ ಸರ್ಕಾರಿ ಕಟ್ಟಡಗಳ ಕುರಿತು

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೭೧ (೪೪೬೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯ ಜಾಗದಲ್ಲಿ ಅರಣ್ಯ ಇಲಾಖೆ ಹೊರತು ಪಡಿಸಿ ಬೇರೆ ಇಲಾಖಾ ಸರ್ಕಾರಿ ಕಛೇರಿಗಳು ಹಾಗೂ ಸರ್ಕಾರಿ ವಸತಿ ಗೃಹಗಳ ಕಟ್ಟಡಗಳು ಇವೆಯೇ; ಇದ್ದಲ್ಲಿ, ಜಿಲ್ಲಾವಾರು ಮಾಹಿತಿ ಒದಗಿಸುವುದು;

(ಆ) ಕೊಡಗು ಜಿಲ್ಲೆಯಲ್ಲಿ ಯಾವ ಯಾವ ಇಲಾಖೆಯ ಕಛೇರಿ ಕಟ್ಟಡ ಹಾಗೂ ವಸತಿ ಗೃಹಗಳ ಕಟ್ಟಡಗಳು ಎಷ್ಟೆಷ್ಟು, ಎಲ್ಲೆಲ್ಲಿವೆ; (ಸ್ಥಳವಾರು ವಿವರ ನೀಡುವುದು)

(ಇ) ಅರಣ್ಯ ಜಾಗದಲ್ಲಿರುವ ಬೇರೆ ಇಲಾಖೆಯ ಸರ್ಕಾರಿ ಕಛೇರಿ ಹಾಗೂ ವಸತಿ ಗೃಹದ ಕಟ್ಟಡಗಳನ್ನು ದುರಸ್ಥಿ ಮಾಡಲು ಅರಣ್ಯ ಇಲಾಖೆಯ ಅನುಮತಿ ಅಗತ್ಯ ಇದೆಯೇ;

(ಈ) ಅರಣ್ಯ ಇಲಾಖಾ ಜಾಗದಲ್ಲಿರುವ ವಿವಿಧ ಇಲಾಖಾ ಕಛೇರಿ ಕಟ್ಟಡ ಹಾಗೂ ವಸತಿ ಗೃಹಗಳ ದುರಸ್ಥಿಗೆ ಅರಣ್ಯ ಇಲಾಖೆಯಿಂದ ಪ್ರಸ್ತುತ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

## ಅಕ್ರಮ–ಸಕ್ರಮ ಅರ್ಜಿಗಳ ವಿಲೇವಾರಿ ಬಗ್ಗೆ

**ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೦೭೨ (೪೪೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂಕಂದಾಯ ಕಾಯ್ದೆ ಅನ್ವಯ ಗ್ರಾಮೀಣ ಪ್ರದೇಶದಲ್ಲಿ ವಿಧಿ ೯೪ (ಸಿ) ಹಾಗೂ ನಗರ ಪ್ರದೇಶದಲ್ಲಿ ವಿಧಿ ೯೪(ಸಿ)(ಸಿ) ನಂತೆ ಇಲ್ಲಿಯವರೆಗೆ ಸಲ್ಲಿಕೆ ಆಗಿರುವ ಒಟ್ಟು ಅಕ್ರಮ–ಸಕ್ರಮ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಆ) ಈ ಅರ್ಜಿಗಳ ವಿಲೇವಾರಿಗೆ ಸಂಬಂಧಿಸಿದಂತೆ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಶೀಘ್ರವಾಗಿ ಅರ್ಜಿಗಳ ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಇವರಿಗೆ ಸ್ವಾಧೀನ ಪತ್ರ (ಹಕ್ಕು ಪತ್ರ)ಗಳನ್ನು ನೀಡಲಾಗುವುದು ಯಾವಾಗ?

## ಅನುದಾನಿತ ಐ.ಟಿ.ಐ. ಕಾಲೇಜುಗಳ ಬಗ್ಗೆ

**ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೦೭೩ (೪೪೪೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಅನುದಾನಿತ ಕಾಲೇಜುಗಳಿವೆ; (ವಿವರ ನೀಡುವುದು) ಯಾವ ವರ್ಷದವರೆಗಿನ ಕಾಲೇಜುಗಳಿಗೆ ಅನುದಾನ ನೀಡಲಾಗಿದೆ;

(ಆ) ಈ ಹಿಂದೆ ಸರ್ಕಾರ ಖಾಸಗಿ ಐ.ಟಿ.ಐ. ಕಾಲೇಜುಗಳಿಗೆ ಅನುದಾನವನ್ನು ಯಾವಾಗ ಮಂಜೂರು ಮಾಡಿತ್ತು;

(ಇ) ಪ್ರಸ್ತುತ ಅನುದಾನಿತ ಐ.ಟಿ.ಐ. ಕಾಲೇಜುಗಳಲ್ಲಿ ಇರುವ ಖಾಲಿ ಹುದ್ದೆಗಳೆಷ್ಟು; ವಿಷಯವಾರು, ಖಾಲಿ ಹುದ್ದೆಗಳ ಮಾಹಿತಿ ನೀಡುವುದು; (ಮೀಸಲಾತಿ ವೃಂದವಾರು ವಿವರ ನೀಡುವುದು)

(ಈ) ಪ್ರಸ್ತುತ ಅನುದಾನಕ್ಕೆ ಒಳಪಡದ ಖಾಸಗಿ ಐ.ಟಿ.ಐ. ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರ ಆಲೋಚಿಸಿದೆಯೇ? (ಇದ್ದಲ್ಲಿ, ಆ ಕಾಲೇಜುಗಳ ವಿವರಗಳ್ನು ಒದಗಿಸುವುದು)

## ಮಂಡ್ಯದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ಬಗ್ಗೆ

**ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೦೭೪ (೪೪೪೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರಿಡಾಂಗಣದ ಅಂದಾಜು ಮೊತ್ತ ಎಷ್ಟು;

(ಆ) ಈ ಕಾಮುಗಾರಿಯ ಟೆಂಡರ್‌ನ್ನು ಯಾವಾಗ ಕರೆಯಲಾಗಿದೆ; ಗುತ್ತಿಗೆದಾರರು ಯಾರು;

(ಇ) ಈ ಕಾಮಗಾರಿ ಆರಂಭವಾದ ದಿನಾಂಕ ಯಾವುದು;

(ಈ) ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## REGARDING LAND ACQUITITION

**ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೦೨೫ (೪೬೧೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(A) Land acquired in favour of bank officers and officials, house building co-operative society in Yelachenahally and Jaraganahally Villages, Uttarahally Hobli, Bangalore South taluk.

(B) Date of notification under section 16(2) of LA Act published;

(C) Whether Govt. has taken (not paper possession) actual physical possession of the acquired land, if so, when; (Details may be provide)

(D) Whether (vacant) actual physical possession vests with the Govt., even now;

(E) If not, who are in the actual possession of the acquired property at present and what action Govt., proposes to take to get the unauthorized occupants vacated from the land;

(F) In case, Govt., cannot take vacant possession land hand over to the society; what will be the fate of the society; Which has struggled for the past 35 years and also successfully contested and own all the cases up to Supreme Court;

(G) What will be the next course of action Govt., proposes in this regard;

(H) Will Govt., proposes any formula for compromising the issue between the society and present occupant; if so what formula?

## ಕರ್ನಾಟಕ ಭೂ ಕಂದಾಯ ಕಾಯ್ದೆ, ೧೯೬೪

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೦೭೬ (೪೪೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂ ಕಂದಾಯ ಕಾಯ್ದೆ, ೧೯೬೪ರ ಕಲಂ ೯೪ಎ, ೯೪ಬಿ ಅನ್ವಯ ನಮೂನೆ ೫೦ ಮತ್ತು ೫೩ ರಲ್ಲಿ ಎಷ್ಟು ಜನ ರೈತರು ಬಗರ್‌ಹುಕುಂ ಸಾಗುವಳಿಯ ಸಕ್ರಮಕ್ಕಾಗಿ ಅರ್ಜಿಗಳನ್ನು ಸಲ್ಲಿಸಿದ್ದರು, ಎಷ್ಟು ಎಕರೆ ಪ್ರದೇಶವನ್ನು ಅದು ಒಳಗೊಂಡಿರುತ್ತದೆ;

(ಆ) ಯಾವ ಯಾವ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಸಂಖ್ಯೆಯಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದುವರೆಗೆ ಎಷ್ಟು ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ; ಆ ಪೈಕಿ ಎಷ್ಟು ಎಕರೆ ಭೂಮಿಯನ್ನು ಸಕ್ರಮಗೊಳಿಸಿ ಆದೇಶಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ವನ್ಯಜೀವಿಗಳು ಮತ್ತು ಅವುಗಳ ಸಂರಕ್ಷಣೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೦೭೭ (೪೪೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ವಿವಿಧ ವನ್ಯಜೀವಿಗಳ ಸಂಖ್ಯೆ ಎಷ್ಟು; (ಪ್ರಾಣಿವಾರು ವಿವರ ನೀಡುವುದು) ಅವುಗಳ ಸಂರಕ್ಷಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಆ) ವನ್ಯಜೀವಿಗಳ ಧಾಮಗಳು ಅಸ್ತಿತ್ವದಲ್ಲಿವೆಯೇ; ಇದ್ದಲ್ಲಿ, ಅವು ಎಲ್ಲೆಲ್ಲಿವೆ; ಅಲ್ಲಿ ಯಾವ ಯಾವ ಪ್ರಾಣಿಗಳನ್ನು ಸಂರಕ್ಷಿಸಲಾಗುತ್ತಿದೆ;

(ಇ) ಅವುಗಳ ಸಂರಕ್ಷಣೆಗಾಗಿ ಸರ್ಕಾರ ಪ್ರತಿ ತಿಂಗಳು ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ? (ಪ್ರಾಣಿವಾರು/ಧಾಮವಾರು ಮಾಹಿತಿ ನೀಡುವುದು)

## ಸ್ಮಶಾನಗಳು ಮತ್ತು ಮೂಲಭೂತ ಸೌಕರ್ಯಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೦೭೮ (೪೪೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಹಳ್ಳಿಗಳು, ಪಟ್ಟಣಗಳು ಮತ್ತು ನಗರ ಪ್ರದೇಶಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಸರ್ಕಾರ ಈ ಎಲ್ಲಾ ಪ್ರದೇಶಗಳಲ್ಲಿ ಸ್ಮಶಾನ ಸೌಲಭ್ಯವನ್ನು ಕಲ್ಪಿಸಿದೆಯೇ; ಕಲ್ಪಿಸಿದಲ್ಲಿ, ಸ್ಮಶಾನವೊಂದಕ್ಕೆ ಎಷ್ಟು ಎಕರೆ ಜಮೀನನ್ನು ಮೀಸಲಿಡಲಾಗಿದೆ; ಯಾವ ಯಾವ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ; (ವಿವರ ನೀಡುವುದು)

(ಇ) ಯಾವ ಯಾವ ಸ್ಥಳಗಳಲ್ಲಿ ಜಾತಿ, ಧರ್ಮವಾರು ಸ್ಮಶಾನಗಳನ್ನು ನಿರ್ಮಿಸಲಾಗಿದೆ; ಅವು ಯಾವುವು? (ವಿವರ ನೀಡುವುದು)

## ಬರಪೀಡಿತ ಪ್ರದೇಶಗಳು ಮತ್ತು  ಒದಗಿಸಲಾದ ಸೌಲಭ್ಯಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೦೭೯ (೪೪೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲುಗಳಲ್ಲಿ ಸರ್ಕಾರ ಎಷ್ಟು ತಾಲ್ಲೂಕುಗಳನ್ನು ಬರಪೀಡತ ತಾಲ್ಲೂಕುಗಳೆಂದು ಘೋಷಣೆ ಮಾಡಿರುತ್ತದೆ; ಅವು ಯಾವುವು;

(ಆ) ಬರ ಪರಿಹಾರ ನಿಮಿತ್ತ ಜನ ಹಾಗೂ ಜಾನುವಾರುಗಳಿಗೆ ಒದಗಿಸಲಾದ ಸೌಲಭ್ಯಗಳೇನು; ವಿತರಿಸಲಾದ ಸಾಮಗ್ರಿಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಾನುವಾರುಗಳಿಗೆ ವಿತರಿಸಲಾದ ಮೇವಿನ ಒಟ್ಟು ಪ್ರಮಾಣವೆಷ್ಟು; ಅದನ್ನು ಯಾರಿಂದ ಖರೀದಿ ಮಾಡಲಾಗಿದೆ; ಎಷ್ಟು ದರದಲ್ಲಿ ಖರೀದಿ ಮಾಡಲಾಗಿರುತ್ತದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಗ್ರಾಮಠಾಣಾ ವ್ಯಾಪ್ತಿಯನ್ನು ಪುನರ್ ನಿಗದಿಪಡಿಸುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೦ (೪೫೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿ ಗ್ರಾಮಠಾಣಾ ವ್ಯಾಪ್ತಿಯನ್ನು ಮೀರಿ ಗ್ರಾಮಗಳು ಬೆಳೆದಿರುವುದು (ವಿಸ್ತಾರ ಹೊಂದಿರುವುದು) ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮಠಾಣಾ ವ್ಯಾಪ್ತಿಯನ್ನು ಈ ಹಿಂದೆ ಯಾವಾಗ ನಿಗದಿಪಡಿಸಲಾಗಿತ್ತು; ಅಂದಿನ ರಾಜ್ಯದ ಜನಸಂಖ್ಯೆಯೆಷ್ಟು;

ಇ) ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸದೇ ಇರುವುದರಿಂದ, ಗ್ರಾಮೀಣ ಪ್ರದೇಶದ ಜನತೆಗೆ ಮನೆ ನಿರ್ಮಿಸಿಕೊಳ್ಳಲು ಹಲವು ರೀತಿಯ ಸಮಸ್ಯೆಗಳುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಗ್ರಾಮಠಾಣಾ ವ್ಯಾಪ್ತಿಯನ್ನು ಪುನರ್ ನಿಗದಿಪಡಿಸಲು ಸರ್ಕಾರ ತೀರ್ಮಾನಿಸಿದೆಯೇ;

ಉ) ತೀರ್ಮಾನಿಸಿದ್ದಲ್ಲಿ ಪುನರ್ ನಿಗದಿಪಡಿಸಲು ಕಾಲಮಿತಿಯೇನು?

## ಕೊಡಗು ಜಿಲ್ಲೆಯ
## ಕ್ರೀಡಾಂಗಣಗಳ ಕಾಮಗಾರಿ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೧ (೪೫೫೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಕೊಡಗು ಜಿಲ್ಲೆಯ ವಿರಾಜಪೇಟೆ ಒಳಾಂಗಣ ಕ್ರೀಡಾಂಗಣ ಹಾಗೂ ಕೂಡಿಗೆಯ ಸಿಂಥೆಟಿಕ್ ಹಾಕಿ ಟರ್ಫ್ ಕ್ರೀಡಾಂಗಣದ ಕಾಮಗಾರಿಗಳಿಗೆ ಮಂಜೂರಾದ ಸಂಪೂರ್ಣ ಅನುದಾನ ಬಿಡುಗಡೆಯಾಗಿದೆಯೇ;

ಆ) ಬಿಡುಗಡೆಯಾಗಿಲ್ಲದಿದ್ದಲ್ಲಿ, ಕಾರಣಗಳೇನು;

ಇ) ಸದರಿ ಕಾಮಗಾರಿಗಳು ಪೂರ್ಣಗೊಂಡು, ಲೋಕಾರ್ಪಣೆ–ಗೊಂಡಿವೆಯೇ;

ಈ) ಸದರಿ ಕಾಮಗಾರಿಗಳು ಪೂರ್ಣಗೊಳ್ಳದಿದ್ದಲ್ಲಿ, ಯಾವ ದಿನಾಂಕದೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ–ಗೊಳಿಸಲಾಗುವುದು?

## ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೨ (೪೫೫೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಮಂಜೂರಾದ ವಿವಿಧ ಶ್ರೇಣಿಕೃತ ಹುದ್ದೆಗಳು ಎಷ್ಟು; ಅವು ಯಾವುವು;

(ಆ) ಸದರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

(ಇ) ಈ ರೀತಿ ಹುದ್ದೆಗಳು ಖಾಲಿ ಇರುವುದರಿಂದ ಕಾಡುಪ್ರಾಣಿ–ಮಾನವ ಸಂಘರ್ಷ, ಅರಣ್ಯ ಸಂರಕ್ಷಣೆ, ಕಾಡಾನೆ ದಾಳಿ ಹಾಗೂ ವನ್ಯಜೀವಿ ಸಂರಕ್ಷಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಯ ಕರ್ತವ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಯಾವುದೇ ಹುದ್ದೆ ಖಾಲಿ ಇಲ್ಲದಂತೆ ಯಾವ ಕಾಲಮಿತಿಯಲ್ಲಿ ತುಂಬಲಾಗುವುದು?

## GIM-2ರಲ್ಲಿ ಮಂಜೂರಾದ ಅನುದಾನದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೩ (೪೪೭೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆ, ಶಿರ್ಸಿ ವಿಭಾಗದ ಸಿದ್ದಾಪುರ ಉಪ ವಿಭಾಗದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ GIM-2 (Green India Mission -2) ಯೋಜನೆಯಲ್ಲಿ ಮಂಜೂರಾದ ಅನುದಾನ ಎಷ್ಟು; (ಯೋಜನೆವಾರು, ಕಾಮಗಾರಿವಾರು, ಆಯವ್ಯಯದ ವಿವರ ನೀಡುವುದು)

(ಆ) ಈ ಮೇಲಿನ ಉಪವಿಭಾಗದಲ್ಲಿ ಬೆಳೆಸಿದ ಶ್ರೀಗಂಧದ ಸಸಿಗಳ ಸಂಖ್ಯೆ ಎಷ್ಟು? (ನೆಡುತೋಪು ಖರ್ಚಿನ ವಿವರ ಅರಣ್ಯಾವಲಯದ ಕಲರ್ ನಕ್ಷೆ ನೀಡುವುದು)

**ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡುವ ಬಗ್ಗೆ**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

ಳಂಲಳ (ಳಳಜಲ) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹೊಸಹಳ್ಳಿ ಗ್ರಾಮದ ಸರ್ವೇ ನಂ. ೧೧೨ರಲ್ಲಿ ಸಾಗುವಳಿ ಮಾಡುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;

(ಆ) ಹಾಗಿದ್ದಲ್ಲಿ, ಎಷ್ಟು ಫಲಾನುಭವಿಗಳಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ;

(ಇ) ಪ್ರತಿಯೊಬ್ಬ ಸಾಗುವಳಿದಾರರಿಗೆ ಹಂಚಿಕೆ ಮಾಡಲಾದ ಜಮೀನಿನ ವಿಸ್ತೀರ್ಣ ಎಷ್ಟು;

(ಈ) ಸದರಿ ಸಾಗುವಳಿದಾರರಿಗೆ ನೀಡಿರುವ ಜಮೀನಿಗೆ ಪೋಡಿ ಮಾಡಿ ಖಾತೆ ಮಾಡಲಾಗಿದೆಯೇ;

(ಉ) ಇನ್ನೂ ಖಾತೆ ಮಾಡದೆ ಉಳಿದಿರುವ ಸಾಗುವಳಿದಾರರ ಹೆಸರು ಮತ್ತು ವಿಸ್ತೀರ್ಣ ನೀಡುವುದು?

## ಸಿಂಗಳೀಕ ಮಂಗನ ಸಾವನ್ನು ತಡೆಗಟ್ಟುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೫ (೪೪೮೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಸೆಕ್ಷನ್‌ನ ಮಹಿಮೆ ಗ್ರಾಮದ ಮಣ್ಣಿನಗದ್ದೆ ಮಹಜರ್‌ನಲ್ಲಿ ಸಿಂಗಳೀಕ ಮಂಗನ ಸಾವನ್ನು ತಡೆಯಲು ಕೇಬಲ್ ಅಳವಡಿಸಲಾಗಿದೆಯೇ;

(ಆ) ಕೇಬಲ್ ಅಳವಡಿಸಲು ಎಷ್ಟು ಖರ್ಚು ವೆಚ್ಚಗಳಾಗಿದೆ; (ಸಂಪೂರ್ಣ ವಿವರ ನೀಡುವುದು)

(ಇ) ಅಳವಡಿಸಲಾದ ಕೇಬಲ್‌ಗಳ ಗುಣಮಟ್ಟದ ಕುರಿತು ಅಧ್ಯಯನ ಮಾಡಿದವರು ಯಾರು; ( ವಿವರ ನೀಡುವುದು)

ಈ) ಈ ಕೇಬಲ್ ಆಗಾಗ ಹರಿದು ಬೀಳುತ್ತಿರುವ, ಸುಟ್ಟು ಹೋಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ?( ವಿವರ ನೀಡುವುದು)

## ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೬ (೪೪೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಉಪ ವಿಭಾಗ, ಗೇರುಸೊಪ್ಪ ವಲಯ ವ್ಯಾಪ್ತಿಯಲ್ಲಿ ಕಳೆದ ಐದು ವರ್ಷದಿಂದ ಕೈಗೊಂಡ ಕಾಮಗಾರಿಗಳು ಯಾವುವು; (ವೆಚ್ಚವಾದ ಮೊತ್ತದ ವಿವರ ನೀಡುವುದು)

(ಆ) ಈ ವಲಯದಲ್ಲಿ ಸಾರ್ವಜನಿಕರಿಗೆ ವಿತರಿಸಲಾದ ಸೋಲಾರ್ ಹೀಟರ್, ಸೋಲಾರ್ ಲ್ಯಾಂಪ್ ಫಲಾನುಭವಿಗಳ ಸಂಖ್ಯೆ ಎಷ್ಟು; (ವೆಚ್ಚಗಳ ವಿವರ, ಅಳವಡಿಸಿದ ಯೋಜನೆದಾರರ ವಿವರ ನೀಡುವುದು)

(ಇ) ಈ ವಲಯದ ಸಿಂಗಳೀಕ ಮಂಗಗಳ ಕುರಿತು ವೈಜ್ಞಾನಿಕ ಅಧ್ಯಯನ ನಡೆದಿದೆಯೇ; ಯಾವ ಸಂಸ್ಥೆ, ಯಾವ ವ್ಯಕ್ತಿಯಿಂದ ವೈಜ್ಞಾನಿಕ ಅಧ್ಯಯನ ನಡೆದಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಹೊನ್ನಾವರ ಉಪವಿಭಾಗದಲ್ಲಿರುವ ಗೇರುಸೊಪ್ಪ ವಲಯದ ಬ್ಲಾಕ್ ವಿವರಗಳನ್ನೊಳಗೊಂಡ ಅರಣ್ಯ ಕಲರ್ ನಕ್ಷೆಯನ್ನು ನೀಡುವುದು;

(ಉ) ಇಲ್ಲಿರುವ ಸಿಂಗಳೀಕ ಮಂಗಗಳ ಸಂಖ್ಯೆ ಎಷ್ಟು; ಅವುಗಳ ಪ್ರಮುಖ ಆಹಾರ ಯಾವುದು; ಆಹಾರವನ್ನು ಅರಣ್ಯ ಇಲಾಖೆ ಪೂರೈಸುತ್ತಿದೆಯೇ?

## ಕಲಬುರಗಿ ಜಿಲ್ಲೆಯ ಬರಪೀಡಿತ ತಾಲ್ಲೂಕುಗಳ ಬಗ್ಗೆ

**ಶ್ರೀ ಇಕ್ಬಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೪೦೮೭ (೪೪೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ; (ವಿವರ ಒದಗಿಸುವುದು)

(ಆ) ಇಂತಹ ತಾಲ್ಲೂಕುಗಳಿಗೆ ಬರ ಪರಿಹಾರವಾಗಿ ಒದಗಿಸಿರುವ ಅನುದಾನವೆಷ್ಟು; (ವಿವರ ಒದಗಿಸುವುದು)

(ಇ) ನಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಬೆಂಗಳೂರು ಉತ್ತರ ತಾಲ್ಲೂಕಿನ ಕರಾಬ್ ಭೂಮಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)** –

೪೦೮೮ (೪೪೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿ, ನಲ್ಲುಕುಂಟೆ (ನಲ್ಕುಂಟೆ) ಗ್ರಾಮದ ಸ.ನಂ. ೧ ರಿಂದ ೧೦೨ರವರೆಗೆ (ಈ ಹಿಂದೆ ಇದ್ದ ಹಳೇ ಸ.ನಂ. ಅಥವಾ ಅದಕ್ಕೆ ಈಗ ನೀಡಿರುವ ಹೊಸ ಸ.ನಂ.) ಇರುವ ಭೂಮಿಯ ವಿಸ್ತೀರ್ಣ ಎಷ್ಟು; ಸ.ನಂ. ಭೂಮಿಯ ಅಳತೆ, ಆಕಾರ್ ಬಂದ್, ಕೃಷಿ, ಕರಾಬ್, ಕೆರೆ ಕಟ್ಟೆ, ಇತ್ಯಾದಿ ವಿವರಗಳನ್ನು ಪ್ರತಿಯೊಂದು ಸರ್ವೇ ನಂ.ಪ್ರಕಾರ (ಹಳೆಯದು/ಹೊಸದು) ಪ್ರತ್ಯೇಕವಾಗಿ ಸಂಪೂರ್ಣವಾಗಿ ಒದಗಿಸುವುದು;

(ಆ) ಬೆಂಗಳೂರು ಜಿಲ್ಲೆ ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:೨೨.೦೭.೧೯೬೧ ರಂದು ವಿಲೇವಾರಿಯಾಗಿರುವ ಪ್ರಕರಣ ಸಂಖ್ಯೆ ೦೧ರ ಪ್ರಕಾರ ಸದರಿ ಸರ್ವೇ ನಂ.ಗಳಲ್ಲಿ ಭೂ ಮಾಲಿಕರ ಪರವಾಗಿ ಇತ್ಯರ್ಥವಾಗಿ, ದಾಖಲೆಯಾಗಿರುವ ಭೂಮಿಯ ವಿಸ್ತೀಣದ ವಿವರಗಳನ್ನು ಒದಗಿಸುವುದು; (ಸರ್ವೇ ನಂ.ಗಳು, ಭೂಮಿಯ ವಿಸ್ತೀರ್ಣ) ತಿರಸ್ಕೃತವಾದ ಸರ್ವೇ ನಂಬರ್‌ಗಳು, ಅವುಗಳಲ್ಲಿದ್ದ ಭೂಮಿಯ ವಿಸ್ತೀರ್ಣ, ತಿರಸ್ಕೃತವಾಗಲು ಕಾರಣಗಳ ಸಮೇತ ಒದಗಿಸುವುದು; ಸದರಿ ಪ್ರಕರಣಗಳ ದಾಖಲೆಗಳನ್ನು ಒದಗಿಸುವುದು;

(ಇ) ದಿನಾಂಕ:೦೨.೦೩.೧೯೬೨ರ ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯ ದಾಖಲೆಯ ಪ್ರಕಾರ ರಿಜಿಸ್ಟರ್ ನಂಬರ್ ೮ (ಸೆಕ್ಷನ್–೨) ಫಾರಂ ನಂ.೮ರ ಮೂಲಕ ದಾಖಲೆಯಾಗಿರುವ ಭೂಮಿಯ ಅಳತೆಯ ವಿವರಗಳನ್ನು ಸರ್ವೇ ನಂಬರ್ ಸಹಿತ ವಿವರ ಒದಗಿಸುವುದು;

(ಈ) ಹಕ್ಕುದಾರರು ಸದರಿ ದಾಖಲೆಗಳ ಪ್ರಕಾರ ಖಾತೆ ಮಾಡಿಕೊಡುವಂತೆ ದಾಖಲೆಗಳ ಸಮೇತ ಅರ್ಜಿ ಸಲ್ಲಿಸಿದ್ದಾರೆಯೇ; ಈ ಬಗ್ಗೆ ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿಗಳು ಖಾತೆ ಮಾಡುವ ಆದೇಶ ನೀಡಿದ್ದಾರೆಯೇ; ಖಾತೆ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಸದರಿ ಭೂಮಿಯನ್ನು ಹಕ್ಕುದಾರರಿಗೆ ಎಷ್ಟು ದಿನದಲ್ಲಿ ಖಾತೆ ಮಾಡಿಕೊಡಲಾಗುವುದು?

## ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣದ ವಿವರದ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೮೯ (೪೪೧೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೀರಾವರಿ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಕಳೆದ ೫ ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು; (ವರ್ಷಾವಾರು, ಯೋಜನೆವಾರು ವಿವರ ನೀಡುವುದು)

(ಆ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ೧೯೯೦ ರಿಂದ ೨೦೧೭ ರವರೆಗೆ ಯಾವ ಯಾವ ನೀರಾವರಿ ಯೋಜನೆಗಳನ್ನು ಅನುಷ್ಠಾನ–ಗೊಳಿಸಲಾಗಿದೆ; ಈ ಅವಧಿಯಲ್ಲಿ ನೀರಾವರಿ ಯೋಜನೆಗಳಿಗೆ ಬಿಡುಗಡೆಗೊಳಿಸಿದ ಅನುದಾನವೆಷ್ಟು; (ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

(ಇ) ಈ ಯೋಜನೆಗಳಿಂದ ಎಷ್ಟು ಎಕರೆ ಜಮೀನನ್ನು ನೀರಾವರಿಗೊಳಪಡಿಸಲಾಗಿದೆ ಮತ್ತು ಎಷ್ಟು ಜನ ರೈತರು ನೀರಾವರಿಯ ಪ್ರಯೋಜನ ಪಡೆದುಕೊಂಡಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

(ಈ) ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ೧೯೯೦ ರಿಂದ ೨೦೧೭ರವರೆಗೆ ಯಾವ ಯಾವ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ; ಈ ಅವಧಿಯಲ್ಲಿ ನೀರಾವರಿ ಯೋಜನೆಗಳಿಗೆ ಬಿಡುಗಡೆಗೊಳಿಸಿದ ಅನುದಾನವೆಷ್ಟು; (ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

(ಉ) ಈ ಯೋಜನೆಗಳಿಂದ ಎಷ್ಟು ಎಕರೆ ಜಮೀನನ್ನು ನೀರಾವರಿಗೊಳಪಡಿಸಲಾಗಿದೆ ಮತ್ತು ಎಷ್ಟು ಜನ ರೈತರು ನೀರಾವರಿಯ ಪ್ರಯೋಜನ ಪಡೆದುಕೊಂಡಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು)

## ಬರಗಾಲದ ಬಗ್ಗೆ

**ಶ್ರೀ ಸಿ. ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೯೦ (೪೪೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ನಿರಂತರವಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಎರಡು ಜಿಲ್ಲೆಗಳ ಬರ ಪರಿಹಾರಕ್ಕಾಗಿ ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರ ಸರ್ಕಾರ ಕಳೆದ ೩ ವರ್ಷಗಳಲ್ಲಿ ಬರ ಪರಿಹಾರಕ್ಕಾಗಿ ನೀಡಿರುವ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಕಾಮಗಾರಿಗಳವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಕೇಂದ್ರ ಸರ್ಕಾರ ನೀಡಿದ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳಲ್ಲಿ ಇದುವರೆವಿಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ಕಾಮಗಾರಿಗಳವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೇಂದ್ರ ಸರ್ಕಾರ ನೀಡಿದ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಅಪೂರ್ಣವಾಗಿರಲು ಕಾರಣಗಳೇನು? (ವಿವರಗಳನ್ನು ನೀಡುವುದು)

## ಕಿತ್ತೂರು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಕಾರ್ಯಾಲಯದ ಬಗ್ಗೆ

**ಶ್ರೀ ಕೆ. ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೯೧ (೪೪೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಕಿತ್ತೂರನ್ನು ಸರ್ಕಾರ ತಾಲ್ಲೂಕು ಎಂದು ಯಾವಾಗ ಘೋಷಣೆ ಮಾಡಿರುತ್ತದೆ;

(ಆ) ಪ್ರಸ್ತುತ ಕಿತ್ತೂರಿನಲ್ಲಿ ಇರುವ ತಾಲ್ಲೂಕು ಮಟ್ಟದ ಕಾರ್ಯಾಲಯಗಳು ಯಾವುವು;

(ಇ) ಇನ್ನೂ ಪ್ರಾರಂಭವಾಗಬೇಕಾದ ಕಾರ್ಯಾಲಯಗಳು ಯಾವುವು; ಅವುಗಳ ಪ್ರಾರಂಭಕ್ಕೆ ತಡವಾಗಲು ಕಾರಣಗಳೇನು;

(ಈ) ಯಾವ ಕಾಲಮಿತಿಯಲ್ಲಿ ಉಳಿದ ಕಾರ್ಯಾಲಯಗಳನ್ನು ಪ್ರಾರಂಭ ಮಾಡಲಾಗುವುದು?

## ರೈತರ ಖಾತೆ ಹಣ ದುರುಪಯೋಗವಾಗಿರುವ ಬಗ್ಗೆ

**ಶ್ರೀ ಕೆ. ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೧೯೨ (೪೪೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರ ಜಮೀನು ಅಳತೆಮಾಡಿ ಖಾತೆ ಮಾಡಲು ಕಟ್ಟಿದ ಹಣ ಖಜಾನೆಗೆ ಕಟ್ಟದೆ ದುರುಪಯೋಗ ಮಾಡಿಕೊಂಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಅವ್ಯವಹಾರ ಮಾಡಿದ ಅಧಿಕಾರಿಗಳು ಯಾರು; ಮತ್ತು ಅದರ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು)೭

(ಇ) ಈ ಅವ್ಯವಹಾರಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸುವರ್ಣಾವತಿ ಜಲಾಶಯದ ನಾಲೆಯ ಹೂಳುತ್ತೆವುದು ಮತ್ತು ರಿಪೇರಿ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೯೩ (೪೬೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸುವರ್ಣಾವತಿ ಜಲಾಶಯದ ಬಲದಂಡೆ ನಾಲೆಯ ನೀರು ಹರಿಸುವ ಮೂಲಕ ಕರಿನಂಜನಪುರ, ರಾಮಸಮುದ್ರ, ಕೋಡಿಮೊಳೆ, ಬಸವನಪುರ ಕೆರೆಗಳಿಗೆ ನೀರು ತುಂಬಿಸಲು ಕ್ರಮ ಜರುಗಿಸಲಾಗಿದೆಯೇ;

(ಆ) ಬಲದಂಡೆ ನಾಲೆಯಲ್ಲಿ ಗಿಡಗಂಟಿಗಳು ಬೆಳೆದು ಹೂಳು ತುಂಬಿದ್ದು ಇಲಾಖೆಯವರು ರಿಪೇರಿ ಕ್ರಮ ತೆಗೆದುಕೊಳ್ಳದೇ, ಸರಾಗವಾಗಿ ನೀರು ಹರಿದು ಹೋಗದೇ ಇದ್ದುದರಿಂದ, ಸ್ಥಳೀಯ ರೈತಾಪಿ ಜನರೇ ನಾಲೆಯ ಗಿಡಗಂಟಿಗಳನ್ನು ಕಿತ್ತು ಸರಿಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಾಲೆಯ ದುರಸ್ಥಿ ಬಗ್ಗೆ ಗಮನಹರಿಸದ ಇಲಾಖೆಯ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದೇ?

## ಜಮೀನುಗಳ ಪೋಡಿ ಮಾಡಿಸುವ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೯೪ (೪೪೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ವರ್ಷದಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಜಮೀನುಗಳನ್ನು ಪೋಡಿ ಮಾಡಿಸಿಕೊಳ್ಳಲು ಬಂದಿರುವ ಅರ್ಜಿಗಳೆಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಖಾಯಂ ಸರ್ವೇಯರ್ ಮತ್ತು ಪರವಾನಗಿ ಸರ್ವೇಯರ್‌ಗಳು ಅಮಾನತ್ತುಗೊಂಡಿದ್ದರೂ ಹಾಗೂ ಪರವಾನಗಿ ರದ್ದಾಗಿದ್ದರೂ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮಗಳೇನು;

(ಇ) ಈ ರೀತಿ ಪರವಾನಗಿ ರದ್ದಾದ ಸರ್ವೇಯರ್‌ಗಳನ್ನೇ ಇಲಾಖೆಯಲ್ಲಿ ಬಳಕೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ಅಂತರ್ಜಲ ಹೆಚ್ಚಿಸುವ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೯೫ (೪೪೩೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಂತರ್ಜಲ ವೃದ್ಧಿಸುವ ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಎಷ್ಟು ಚಿಕ್ಕ ಕೆರೆಗಳು, ಹೊಂಡಗಳು ಹಾಗೂ ನೀರು ಸಂಗ್ರಹ ತೊಟ್ಟಿಗಳನ್ನು ನಿರ್ಮಿಸಲಾಗಿವೆ; (ಕಳೆದ ೩ ವರ್ಷಗಳ ವರ್ಷವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಆ) ಈ ಕೆರೆ, ಹೊಂಡ ಹಾಗೂ ತೊಟ್ಟಿಗಳನ್ನು ತಾಲ್ಲೂಕುಗಳ ಯಾವ ಯಾವ ರೈತರ ಜಮೀನುಗಳಲ್ಲಿ ನಿರ್ಮಿಸಲಾಗಿದೆ; (ಕಳೆದ ೩ ವರ್ಷಗಳ ವರ್ಷವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಇ) ಇವುಗಳ ನಿರ್ಮಾಣಕ್ಕೆ ತಗುಲಿರುವ ವೆಚ್ಚವೆಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಈ) ಸದರಿ ಕಾಮಗಾರಿಗಳಿಂದಾಗಿ ಒಟ್ಟು ಎಷ್ಟು ಪ್ರಮಾಣದ ನೀರು ಸಂಗ್ರಹವಾಗಲಿದೆ; ಇದರಿಂದ ಎಷ್ಟು ರೈತರುಗಳ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು? (ತಾಲ್ಲೂಕುವಾರು ವಿವರ ನೀಡುವುದು)

## ಮನೆಗಳ ನಿರ್ಮಾಣ ಮತ್ತು ಹಂಚಿಕೆ ಬಗ್ಗೆ

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೧೯೬ (೪೪೪೪೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ ರಿಂದ ಈವರೆಗೆ ಯಾವ ಯಾವ ಯೋಜನೆಗಳಡಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ;

(ಆ) ನಿರ್ಮಾಣಗೊಂಡ ಮನೆಗಳಲ್ಲಿ ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ;

(ಇ) ಗುಡಿಸಲು ಮುಕ್ತ ರಾಜ್ಯ ಘೋಷಣೆಯಂತೆ ಇನ್ನೂ ಎಷ್ಟು ಮನೆಗಳನ್ನು ನಿರ್ಮಿಸಲು ಗುರಿಯನ್ನು ಹಮ್ಮಿಕೊಳ್ಳಲಾಗಿದೆ; (ವಿವರ ನೀಡುವುದು)

(ಈ) ಇತ್ತೀಚೆಗೆ ಒಂದು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯನ್ನು ಮುಟ್ಟಲಾಗಿದೆಯೇ; ಅದಕ್ಕೆ ಪೂರಕವಾಗಿ ಈವರೆಗೆ ಆದಂತಹ ಪ್ರಗತಿಯ ವಿವರವನ್ನು ನೀಡುವುದು;

(ಉ) ಕೊಳಚೆ ಪ್ರದೇಶದಲ್ಲಿ ಮೂಲ ಸೌಕರ್ಯ ಕಲ್ಪಿಸಿ ಮನೆಗಳನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಕ್ರೀಡಾ ಹಾಸ್ಟೆಲ್‌ನಲ್ಲಿರುವ ಮಕ್ಕಳ ರಕ್ಷಣೆ ಬಗ್ಗೆ

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೧೯೭ (೪೫೪೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಕ್ರೀಡಾ ಶಾಲೆಗಳಿವೆ; ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ;

(ಆ) ಕ್ರೀಡಾ ಹಾಸ್ಟೆಲ್‌ಗಳ ವಿದ್ಯಾರ್ಥಿಗಳ ಸಾಮರ್ಥ್ಯವೆಷ್ಟು; ದಾಖಲಾಗಿರುವ ಗಂಡು–ಹೆಣ್ಣು ವಿದ್ಯಾರ್ಥಿಗಳೆಷ್ಟು; ಇಂತಹ ಕ್ರೀಡಾ ಹಾಸ್ಟೆಲ್‌ಗಳಲ್ಲಿ ವಿವಿಧ ಕ್ರೀಡೆಗಳಲ್ಲಿ ತರಬೇತಿ ನೀಡಲು ಎಷ್ಟು ತರಬೇತಿದಾರರು ಇರಬೇಕು; ಪ್ರಸ್ತುತ ಎಷ್ಟು ತರಬೇತಿದಾರರು ಇದ್ದಾರೆ; (ಪ್ರತಿ ಕ್ರೀಡೆಗೆ ಸಂಬಂಧಿಸಿದಂತೆ ವಿವರ ನೀಡುವುದು)

(ಇ) ಕ್ರೀಡಾ ಹಾಸ್ಟೆಲ್‌ಗಳಲ್ಲಿ ಕಳೆದ ೫ ವರ್ಷಗಳಲ್ಲಿ ನಡೆದಿರುವ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿವರ ನೀಡುವುದು; ಹಾಗೂ ಕೈಗೊಂಡಿರುವ ಕ್ರಮಗಳ ಪೂರ್ಣ ಮಾಹಿತಿ ನೀಡುವುದು;

(ಈ) ಈ ಕ್ರೀಡಾ ಹಾಸ್ಟೆಲ್‌ಗಳಲ್ಲಿ ಮಕ್ಕಳ ರಕ್ಷಣೆ ನೀತಿಯನ್ನು ಜಾರಿ ಮಾಡಲಾಗಿದೆಯೇ;

(ಉ) ಕ್ರೀಡಾ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸುವಲ್ಲಿ ಇರುವ ತೊಂದರೆಗಳೇನು; ನಿವಾರಿಸಲು ಸರ್ಕಾರ ಏನು ಕ್ರಮಕೈಗೊಂಡಿದೆ?

## ಕಾವೇರಿ ನೀರಾವರಿ ನಿಗಮದಿಂದ ನೀಡಿರುವ ಅನುದಾನದ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು)–**

ಳ೧೯ಲ (ಳಳಳಲ) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ನೀರಾವರಿ ನಿಗಮದಿಂದ ಕಳೆದ ಮೂರು ವರ್ಷಗಳಲ್ಲಿ ರಾಮನಗರ ಜಿಲ್ಲೆಯ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಖರ್ಚು ಮಾಡಲಾದ ಹಣವೆಷ್ಟು; ಇತ್ತೀಚಿನ ಪ್ರಗತಿಯ ಸಂಪೂರ್ಣ ವಿವರಗಳನ್ನು ನೀಡುವುದು;

(ಆ) ಸರ್ಕಾರ ಬಿಡುಗಡೆ ಮಾಡಿರುವ ಅನುದಾನದಲ್ಲಿ ಇದುವೆರೆವಿಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; ಕಾಮಗಾರಿಗಳವಾರು ವಿವರಗಳನ್ನು ಒದಗಿಸುವುದು?

## ಕಾಡಾನೆ ಹಾವಳಿ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು)–**

ಳ೧೯೯ (ಳಳಳ೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ೩ ವರ್ಷಗಳಲ್ಲಿ ಕಾಡಾನೆಗಳ ಹಾವಳಿಯಿಂದ ರೈತರ ಬೆಳೆಹಾನಿ, ಪ್ರಾಣಹಾನಿಯಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; (ಮಾಹಿತಿ ನೀಡುವುದು)

(ಆ) ಮಾನವ ಮತ್ತು ಕಾಡಾನೆಗಳ ಸಂಘರ್ಷದಿಂದಾಗಿ ಮೃತಪಟ್ಟ/ಬೆಳೆ ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ನೀಡಿರುವ ಪರಿಹಾರ, ಕಳೆದ ೩ ವರ್ಷಗಳ ಮೊತ್ತ ಎಷ್ಟು? (ಮಾಹಿತಿ ನೀಡುವುದು)

## ಏತ ನೀರಾವರಿ ಯೋಜನೆ ಬಗ್ಗೆ

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೦೦ (೪೪೫೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಸವದತ್ತಿ ತಾಲ್ಲೂಕಿನ ಸತ್ತಿಗೇರಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆಯೇ;

(ಆ) ಅನುಮೋದನೆ ದೊರೆತಿದ್ದಲ್ಲಿ, ಕಾಮಗಾರಿಯ ಅಂದಾಜು ವೆಚ್ಚ ಎಷ್ಟು;

(ಇ) ನೀರು ಹಂಚಿಕೆಯ ಮಂಜೂರಾತಿ ದೊರೆತಿದೆಯೇ;

(ಈ) ಈ ಯೋಜನೆಯಿಂದ ಎಷ್ಟು ಗ್ರಾಮಗಳಿಗೆ ನೀರಾವರಿ ಸೌಲಭ್ಯ ದೊರೆಯಲಿದೆ;

(ಉ) ಸೌಲಭ್ಯ ದೊರೆತಲ್ಲಿ ಪ್ರಯೋಜನ ಪಡೆಯುವ ಗ್ರಾಮಗಳು ಯಾವುವು? (ಗ್ರಾಮವಾರು, ವಿಸ್ತೀರ್ಣವಾರು ವಿವರ ನೀಡುವುದು)

## ಸರ್ಕಾರಿ ಕೈಗಾರಿಕಾ ತರಬೇತಿ ಕಾಲೇಜು ನಿರ್ಮಾಣ ಕುರಿತು

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೦೧ (೪೪೫೧) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ರಾಯಬಾಗ ಪಟ್ಟಣಕ್ಕೆ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಕಾಲೇಜು ಸ್ಥಾಪಿಸಲಾಗುವುದು ಎಂದು ಸನ್ ೨೦೧೭–೧೮ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಘೋಷಣೆ ಮಾಡಿದ್ದು ಕೈಗಾರಿಕಾ ತರಬೇತಿ ಕಾಲೇಜು ಸ್ಥಾಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;

(ಆ) ಇದನ್ನು ಕಾರ್ಯರೂಪಕ್ಕೆ ತರಲು ಬೇಕಾದ ಕಾಲಮಿತಿ ಎಷ್ಟು? (ವಿವರ ನೀಡುವುದು)

## ಬೆಳಗಾವಿ ಜಿಲ್ಲೆಯಲ್ಲಿ ಮಳೆಯಿಂದ ಆದ ಹಾನಿ ಬಗ್ಗೆ

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧೦೨ (೪೪೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಇತ್ತೀಚೆಗೆ ಆದ ಮಳೆಯಿಂದಾಗಿ ಹಾನಿಗೊಳಗಾದ ಬೆಳೆಯ ಮೊತ್ತ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಹಾನಿಗೊಳಗಾದ ಬೆಳೆಗಳ ಬಗ್ಗೆ ಸರ್ವೇ ಕಾರ್ಯ ಪೂರ್ಣಗೊಂಡಿದೆಯೇ;

(ಇ) ಬೆಳೆ ಹಾನಿಯಾದ ರೈತರಿಗೆ ಸೂಕ್ತ ಪರಿಹಾರ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಳಗಾವಿ – ಪ್ರತಿಗಳು–750